1. **ಮೊಬೈಲ್ ಅಪ್ಲಿಕೇಶನ್ ಡೌನ್‌ಲೋಡ್ ಮಾಡಲು, ಇಲ್ಲಿ ಕ್ಲಿಕ್ ಮಾಡಿ** http://play.google.com/store/app/details?id=com.ksouonlinestudy.app.twa ಪ್ರವೇಶದ ಸಮಯದಲ್ಲಿ ನೀಡಲಾದ ವಿದ್ಯಾರ್ಥಿಗಳ ಮೊಬೈಲ್ ಸಂಖ್ಯೆಯೊಂದಿಗೆ ಲಾಗಿನ್ ಮಾಡಿ ಮತ್ತು **OTP** ಅನ್ನು ಭರ್ತಿ ಮಾಡಿ.
2. ಕಂಪ್ಯೂಟರ್, ಲ್ಯಾಪ್‌ಟಾಪ್, ಐಒಎಸ್ ಮೊಬೈಲ್‌ನಲ್ಲಿ **KSOU Academic Platform** ಅನ್ನು ಪ್ರವೇಶಿಸಲು, ವೆಬ್‌ಸೈಟ್‌ಗೆ ಹೋಗಿ:

www.ksouonlinestudy.com ಮತ್ತು ಲಾಗಿನ್ ಕ್ಲಿಕ್ ಮಾಡಿ.

3. ಆನ್‌ಲೈನ್ ಮೂಲಕ ಅಸೈನ್‌ಮೆಂಟ್ ಸಲ್ಲಿಸುವುದು ಹೇಗೆ?
   - ಲಾಗಿನ್ ಆದ ನಂತರ ಡ್ಯಾಶ್‌ಬೋರ್ಡ್‌ನಲ್ಲಿ ಅಸೈನ್‌ಮೆಂಟ್ಸ್ ಟ್ಯಾಬ್ ಮೇಲೆ ಕ್ಲಿಕ್ ಮಾಡಿ.
   - ಕೋರ್ಸ್‌ಗಳ ಪಟದ ಅಡಿಯಲ್ಲಿ, ಅಸೈನ್‌ಮೆಂಟ್ ಪ್ರಶ್ನೆಗಳನ್ನು ವೀಕ್ಷಿಸಲು ಆಯಾ ಕೋರ್ಸ್ ಹೆಸರುಗಳ ಮೇಲೆ ಕ್ಲಿಕ್ ಮಾಡಿ.
   - ಅಸೈನ್‌ಮೆಂಟ್ ಮೇಲೆ ಕ್ಲಿಕ್ ಮಾಡಿ ಮತ್ತು ಕೈಯಿಂದ ಬರೆಯಲಾದ ಅಸೈನ್‌ಮೆಂಟ್ ಸ್ಕ್ಯಾನ್ ಮಾಡಿದ ಪ್ರತಿಯನ್ನು ಒಂದೇ pdf ಫೈಲ್ ಆಗಿ ಅಪ್‌ಲೋಡ್ ಮಾಡಿ.
   - ಅಪ್‌ಲೋಡ್ ಮಾಡಿದ ಅಸೈನ್‌ಮೆಂಟ್‌ನಲ್ಲಿರುವ ವಿಷಯಗಳು ಈ ಕೆಳಗಿನ ಮಾಹಿತಿಯನ್ನು ಹೊಂದಿರಬೇಕು.

1. ಕೋರ್ಸ್‌ನ ಶೀರ್ಷಿಕೆ, ನಿಮ್ಮ ದಾಖಲಾತಿ ಸಂಖ್ಯೆ, ಸೆಮಿಸ್ಟರ್ ವಿವರಗಳೊಂದಿಗೆ ಶೀಟ್‌ಗಳಲ್ಲಿ ನಿಯೋಜನೆ ಉತ್ತರಗಳನ್ನು ಬರೆಯಿರಿ.
2. ಎಲ್ಲಾ ಅಸೈನ್‌ಮೆಂಟ್ ಪುಟಗಳಲ್ಲಿ ಕಡ್ಡಾಯವಾಗಿ ಸ್ವಯಂ ಸಹಿ ಮತ್ತು ದಿನಾಂಕವನ್ನು ಹಾಕಿ.
   - ಪುಟಗಳನ್ನು ಸ್ಕ್ಯಾನ್ ಮಾಡಿ ಮತ್ತು ಒಂದೇ pdf ಫೈಲ್ ಮಾಡಿ.
   - pdf ಫೈಲ್‌ನ್ನು ಅಪ್‌ಲೋಡ್ ಮಾಡಿ ಮತ್ತು ಸಲ್ಲಿಸಲು ಮೇಲೆ ಕ್ಲಿಕ್ ಮಾಡಿ ಮತ್ತು ಸಲ್ಲಿಕೆ ಸ್ಥಿತಿಗಾಗಿ ನಿರೀಕ್ಷಿಸಿ.
   - ನಿಯೋಜನೆಯನ್ನು ತಿರಸ್ಕರಿಸಿದರೆ, ಲಾಗ್‌ಗಳನ್ನು ಪರಿಶೀಲಿಸಿ ಮತ್ತು ಒಮ್ಮೆ ಮರು–ಅಪ್‌ಲೋಡ್ ಮಾಡಿ.
   - ತಪ್ಪಾದ ಫೈಲ್ ಅನ್ನು ಅಪ್‌ಲೋಡ್ ಮಾಡಿದ್ದರೆ, ಸರಿಯಾದ ಫೈಲ್ ಅನ್ನು ಆಯ್ಕೆ ಮಾಡಿ ಮತ್ತು "ಅಪ್‌ಡೇಟ್" ಕ್ಲಿಕ್ ಮಾಡಿ. ಹಳೆಯ ಫೈಲ್ ಅನ್ನು ಅಳಿಸಲಾಗುತ್ತದೆ ಮತ್ತು ಹೊಸದನ್ನು ನವೀಕರಿಸಲಾಗುತ್ತದೆ.

4. ನ್ಯಾವಿಗೇಷನ್ ಆಯ್ಕೆಗಳು ಮೇಲಿನ ಬಲ ಮೂಲೆಯಲ್ಲಿ, ಮೂರು ಪ್ರಮುಖ ಆಯ್ಕೆಗಳನ್ನು ಪ್ರವೇಶಿಸಿ:

3. ಅಧಿಸೂಚನೆಗಳು: ಎಲ್ಲಾ ವಿಶ್ವವಿದ್ಯಾನಿಲಯದ ಸಂದೇಶಗಳು ಮತ್ತು ಅಧಿಸೂಚನೆಗಳು.
4. ಪ್ರೊಫೈಲ್: ನಿಮ್ಮ ಹೆಸರು, ಸೆಮಿಸ್ಟರ್ ಮತ್ತು ಇಮೇಲ್ ಮಾಹಿತಿಯನ್ನು ವೀಕ್ಷಿಸಿ ಮತ್ತು ನವೀಕರಿಸಿ.

- ಸಹಾಯವಾಣಿ ಸಂಖ್ಯೆ: ನಿಮ್ಮ ನೊಂದಾಯಿತ ಮೊಬೈಲ್ ಸಂಖ್ಯೆ, ಕೋರ್ಸಗಳ ಬದಲಾವಣೆಗಳ ಕುರಿತು ನವೀಕರಿಸಿದ ಮಾಹಿತಿಗಾಗಿ, ಸಹಾಯವಾಣಿಯನ್ನು 9873037405 ನಲ್ಲಿ ಸಂಪರ್ಕಿಸಿ. ನಿಮಗೆ ಅಗತ್ಯವಿರುವ ಯಾವುದೇ ಮಾರ್ಪಾಡುಗಳು ಅಥವಾ ನವೀಕರಣಗಳೊಂದಿಗೆ ಸಹಾಯಕ್ಕಾಗಿ ಸಂಪರ್ಕಿಸಲು ಹಿಂಜರಿಯಬೇಡಿ.

5. SLM ರೆಪೊಸಿಟರಿ: ನೀವು ಸ್ವಯಂ ಕಲಿಕಾ ಸಾಮಗ್ರಿಗಳನ್ನು ಪಡೆಯಬಹುದು, ವಿಡಿಯೋ ತರಗತಿಗಳು, ಆಡಿಯೋ ಮತ್ತು ಹಿಂದಿನ ವರ್ಷದ ಪ್ರಶ್ನೆ ಪತ್ರಿಕೆಗಳನ್ನು ಪ್ರವೇಶಿಸಬಹುದು.

6. ಲೈವ್ ತರಗತಿಗಳು

- ಲೈವ್ ತರಗತಿಗಳು
- ರೆಕಾರ್ಡ್ ಮಾಡಿದ ಸೆಕ್ಷನ್‌ಗಳು ಮತ್ತು ವೀಡಿಯೋಗಳನ್ನು ಪಡೆಯಿರಿ.

7. ಪರೀಕ್ಷಾ ವಿಭಾಗ

- ಪರೀಕ್ಷಾ ಪೋರ್ಟಲ್‌ಗೆ (ODL ಪ್ರೋಗ್ರಾಂಗಳು) ಮರು ನಿರ್ದೇಶಿಸಲು ಕ್ಲಿಕ್ ಮಾಡಿ. https://ksouprotal.com/views/examhome.aspx
- ಪರೀಕ್ಷಾ ಪೋರ್ಟಲ್‌ನಲ್ಲಿ ನಿಮ್ಮ ಪರೀಕ್ಷಾ ಫಲಿತಾಂಶಗಳನ್ನು ತಕ್ಷಣ ವೀಕ್ಷಿಸಿ. ಪೋರ್ಟಲ್‌ನಲ್ಲಿರುವ ಸುರಕ್ಷಿತ ಪಾವತಿ ಗೇಟ್‌ವೇ ಮೂಲಕ ನಿಮ್ಮ ಪರೀಕ್ಷಾ ಶುಲ್ಕವನ್ನು ಅನುಕೂಲಕರವಾಗಿ ಪಾವತಿಸಿ.

ಪ್ರವೇಶ ಶುಲ್ಕ ಸಂರಚನೆ :, ಸ್ನಾತಕಪೂರ್ವ ಪದವಿ ಸರ್ಟಿಫಿಕೇಟ್ ಕೋರ್ಸುಗಳು

ಕ್ರ. ಸಂ.	ಸ್ನಾತಕಪೂರ್ವ ಪದವಿ ಸರ್ಟಿಫಿಕೇಟ್ ಶಿಕ್ಷಣ ಕ್ರಮ	ಮೊತ್ತ
01	ಸ್ನಾತಕಪೂರ್ವ ಪದವಿ ಸರ್ಟಿಫಿಕೇಟ್ ಇನ್ ಪಂಚಾಯತ್ ರಾಜ್ (ಯುಜಿಸಿಪಿಆರ್)	5,390/-
02	ಸ್ನಾತಕಪೂರ್ವ ಪದವಿ ಸರ್ಟಿಫಿಕೇಟ್ ಇನ್ ಇನ್‌ಫರ್‌ಮೇಷನ್ ಕಮ್ಯುನಿಕೇಷನ್ ಟೆಕ್ನಾಲಜಿ (ಯುಜಿಸಿಐಸಿಟಿ)	6,490/-
03	ಸ್ನಾತಕಪೂರ್ವ ಪದವಿ ಸರ್ಟಿಫಿಕೇಟ್ ಭಾಷಾಂತರ ಅಧ್ಯಯನ (ಯುಜಿಸಿಟಿಎಸ್)	5,390/-
04	ಜ್ಯೋತಿರ್ ವಿಜ್ಞಾನ ಸ್ನಾತಕಪೂರ್ವ ಪದವಿ ಸರ್ಟಿಫಿಕೇಟ್ (ಯುಜಿಸಿಜೆವಿ)	10,200/-

ಪರೀಕ್ಷಾ ಶುಲ್ಕ ಸಂರಚನೆ : ಸ್ನಾತಕಪೂರ್ವ ಪದವಿ ಸರ್ಟಿಫಿಕೇಟ್ ಕೋರ್ಸುಗಳು

ಕ್ರ.ಸಂ.	ಸ್ನಾತಕಪೂರ್ವ ಪದವಿ ಸರ್ಟಿಫಿಕೇಟ್ ಶಿಕ್ಷಣ ಕ್ರಮ	ಮೊತ್ತ.
1	ಸ್ನಾತಕಪೂರ್ವ ಪದವಿ ಸರ್ಟಿಫಿಕೇಟ್ ಇನ್ ಪಂಚಾಯತ್ ರಾಜ್ (ಸಿಪಿಆರ್)	1100/-
2	ಸ್ನಾತಕಪೂರ್ವ ಪದವಿ ಸರ್ಟಿಫಿಕೇಟ್ ಇನ್ ಇನ್‌ಫರ್‌ಮೇಷನ್ ಕಮ್ಯುನಿಕೇಷನ್ ಟೆಕ್ನಾಲಜಿ (ಸಿಐಸಿಟಿ)	1100/-
3	ಸ್ನಾತಕಪೂರ್ವ ಪದವಿ ಸರ್ಟಿಫಿಕೇಟ್ ಭಾಷಾಂತರ ಅಧ್ಯಯನ(ಯುಜಿಸಿಟಿಎಸ್)	1100/-
4	ಜ್ಯೋತಿರ್ ವಿಜ್ಞಾನ ಸ್ನಾತಕಪೂರ್ವ ಪದವಿ ಸರ್ಟಿಫಿಕೇಟ್ (ಯುಜಿಸಿಜೆವಿ)	1100/-

14. ವಿದ್ಯಾರ್ಥಿ ಬೆಂಬಲ ಸೇವೆಗಳು

ವಿಶ್ವವಿದ್ಯಾನಿಲಯವು ವಿದ್ಯಾರ್ಥಿ ಸ್ನೇಹಿ ಬೆಂಬಲ ಸೇವೆಗಳನ್ನು ಸೃಜಿಸಿದೆ. ವಿದ್ಯಾರ್ಥಿ ಬೆಂಬಲ ಸೇವೆಗಳು ಯಾವುದೇ ತೊಂದರೆಗಳಿಲ್ಲದೆ ಕೇಂದ್ರ ಸ್ಥಾನದಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಮುಂದಿನ ದಿನಗಳಲ್ಲಿ ಇಂತಹ ಸೇವೆಗಳನ್ನು ಪ್ರಾದೇಶಿಕ ಕೇಂದ್ರ ಮತ್ತು ಕಲಿಕಾರ್ಥಿ ಸಹಾಯ ಕೇಂದ್ರಗಳಲ್ಲಿ ಅಗತ್ಯ ಕ್ರಮ ಕೈಗೊಳ್ಳುವುದರ ಮೂಲಕ ಒದಗಿಸಲಾಗುವುದು.

ಪ್ರಾದೇಶಿಕ ಕೇಂದ್ರಗಳು ಮತ್ತು ಕಲಿಕಾರ್ಥಿ ಸಹಾಯ ಕೇಂದ್ರಗಳು

ವಿಶ್ವವಿದ್ಯಾನಿಲಯವು ವಿದ್ಯಾರ್ಥಿಗಳ ಅಗತ್ಯತೆಗಳನ್ನು ಪೂರೈಸಲು ಕಟಿಬದ್ಧವಾಗಿದೆ. ಕರಾಮುವಿಯು ಪ್ರಾದೇಶಿಕ ಕೇಂದ್ರಗಳನ್ನು ಕರ್ನಾಟಕ ರಾಜ್ಯಾದ್ಯಂತ ಸ್ಥಾಪಿಸಿದೆ ಮತ್ತು ಶೈಕ್ಷಣಿಕ ದೃಷ್ಟಿಯಿಂದ ವಿದ್ಯಾರ್ಥಿ ಮತ್ತು ವಿಶ್ವವಿದ್ಯಾನಿಲಯದ ನಡುವೆ ಅನ್ಯೋನ್ಯ ಕ್ರಿಯೆಯನ್ನು ಒದಗಿಸುತ್ತಿದೆ **(ನೋಡಿ: ಅನುಬಂಧ–2)**.

ಕರಾಮುವಿಯು ಮೂರು ಹಂತದ ವ್ಯವಸ್ಥೆಯ ವಿದ್ಯಾರ್ಥಿ ಬೆಂಬಲ ಸೇವಾ ಕಾರ್ಯಗಳನ್ನು ನಿರ್ವಹಿಸುತ್ತದೆ. ಅವುಗಳೆಂದರೆ –

ಅ. ಕೇಂದ್ರಸ್ಥಾನ

ಆ. ಪ್ರಾದೇಶಿಕ ಕೇಂದ್ರಗಳು

ಇ. ಕಲಿಕಾರ್ಥಿ ಸಹಾಯ ಕೇಂದ್ರಗಳು (ಅಧ್ಯಯನ ಕೇಂದ್ರಗಳು)

ಕೇಂದ್ರ ಕಚೇರಿಯು ಪ್ರಾದೇಶಿಕ ಕೇಂದ್ರಗಳ ಮತ್ತು ಅಧ್ಯಯನ ಕೇಂದ್ರಗಳ ಎಲ್ಲಾ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ.ಪ್ರಾದೇಶಿಕ ಕೇಂದ್ರದಲ್ಲಿ ಪ್ರಾದೇಶಿಕ ನಿರ್ದೇಶಕರು ಇರುತ್ತಾರೆ.ಇಲ್ಲಿ ಪ್ರವೇಶಾತಿ ಪ್ರಕ್ರಿಯೆ, ಅಧ್ಯಯನ ಸಾಮಗ್ರಿಗಳ ವಿತರಣೆ, ಸಮಾಲೋಚನೆ ಮತ್ತು ಸಂಪರ್ಕ ಕಾರ್ಯಕ್ರಮಗಳ ನಿರ್ವಹಣೆ ಹಾಗೂ ನಿರಂತರ ಮೌಲ್ಯಮಾಪನ ನಡೆಯುತ್ತದೆ. ವಿಶ್ವವಿದ್ಯಾನಿಲಯದ ಸೂಚನೆಯಂತೆ ಪ್ರಾದೇಶಿಕ ಕೇಂದ್ರಗಳು ಕಾಲಕಾಲಕ್ಕೆ ವಿದ್ಯಾರ್ಥಿಗಳಿಗೆ ಎಲ್ಲಾ ಮಾಹಿತಿಗಳನ್ನು ಒದಗಿಸುತ್ತವೆ. (ನೋಡಿ: ಪ್ರಾದೇಶಿಕ ಕೇಂದ್ರ ಮತ್ತು ಅಧ್ಯಯನ ಕೇಂದ್ರಗಳ ಪಟ್ಟಿ :**ಅನುಬಂಧ-II**)

<u>ಮೈಸೂರಿನ ಕೇಂದ್ರ ಕಚೇರಿಯಲ್ಲಿರುವ ಗ್ರಂಥಾಲಯ</u>

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಗ್ರಂಥಾಲಯವು 1996 ರಿಂದ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ವಿಶ್ವವಿದ್ಯಾನಿಲಯದ ಅಧ್ಯಾಪಕೇತರ ಸಿಬ್ಬಂದಿಗಳ ಶೈಕ್ಷಣಿಕ ಮತ್ತು ಸಂಶೋಧನೆಯ ಅಗತ್ಯವನ್ನು ಪೂರೈಸುತ್ತಿದೆ. ಇಂದು ಗ್ರಂಥಾಲಯದಲ್ಲಿ ಒಂದು ಲಕ್ಷಕ್ಕೂ ಅಧಿಕ ಗ್ರಂಥಗಳು ಇದಲ್ಲದೆ ಓದುಗರಿಗೆ ಸುಮಾರು 10,000 ಕ್ಕಿಂತ ಹೆಚ್ಚು ಇ-ಪುಸ್ತಕಗಳು ಗ್ರಂಥಾಲಯದಲ್ಲಿ ಲಭ್ಯವಿದ್ದು, ಪುಸ್ತಕಗಳು, ನಿಯತಕಾಲಿಕೆಗಳು, ಪರಾಮರ್ಶನ ಪುಸ್ತಕಗಳು, ವಿಶ್ವಕೋಷಗಳು, ವರದಿಗಳು, ಪ್ರಬಂಧಗಳು, ದೃಶ್ಯ-ಶ್ರವ್ಯ ಸಾಮಗ್ರಿಗಳು ಮುಂತಾದವು ಗ್ರಂಥಾಲಯದಲ್ಲಿ ಲಭ್ಯವಿದೆ. ಪ್ರಸ್ತುತ 100ಕ್ಕೂ ಹೆಚ್ಚು ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ನಿಯತಕಾಲಿಕೆಗಳು ಪರಾಮರ್ಶನೆಗೆ ಲಭ್ಯವಿದೆ.ಗ್ರಂಥಾಲಯವು ಈಗಿರುವ ಡಿಜಿಟಲ್ ಲೈಬ್ರರಿಯನ್ನು ಉತ್ತಮ ಪಡಿಸುವ ಪ್ರಯತ್ನ ಮಾಡುತ್ತಿದೆ.

<u>ಸದಸ್ಯತ್ವ ಮತ್ತು ಎರವಲು ಚೀಟಿ</u>:

- ವಿಶ್ವವಿದ್ಯಾನಿಲಯದಲ್ಲಿ ಪ್ರವೇಶಾತಿ ಪಡೆದ ನಂತರ ವಿತರಿಸಲ್ಪಟ್ಟ ವಿದ್ಯಾರ್ಥಿ ಗುರುತಿನ ಕಾರ್ಡನ್ನು ಪಡೆದ ಮೇಲೆ ವಿಶ್ವವಿದ್ಯಾನಿಲಯದ ಎಲ್ಲಾ ವಿದ್ಯಾರ್ಥಿಗಳು ಗ್ರಂಥಾಲಯಕ್ಕೆ ಸದಸ್ಯರಾಗಬಹುದು.

- ಸದಸ್ಯತ್ವವನ್ನು ಪಡೆಯಬೇಕಾದರೆ ಸದಸ್ಯತ್ವ ಅರ್ಜಿಯನ್ನು ಭರ್ತಿಮಾಡಿ ಅದರ ಜೊತೆಯಲ್ಲಿ ಸ್ನಾತಕಪೂರ್ವ, ಸ್ನಾತಕೋತ್ತರ ವಿದ್ಯಾರ್ಥಿಗಳು 2 ಪಾಸ್‌ಪೋರ್ಟ್ ಹಾಗೂ 1 ಸ್ಟ್ಯಾಂಪ್ ಸೈಜ್ ಅಳತೆಯ ಒಟ್ಟು ಮೂರು ಭಾವಚಿತ್ರಗಳನ್ನು ಗ್ರಂಥಾಲಯ ಕಛೇರಿಯಲ್ಲಿ ಸಲ್ಲಿಸಬೇಕು.

- ಸ್ನಾತಕ ಪೂರ್ವ, ಸ್ನಾತಕೋತ್ತರ, ವಿದ್ಯಾರ್ಥಿಗಳು ರೂ.250/- ಗಳನ್ನು ಹಿಂಪಾವತಿಸುವ ಭದ್ರತಾ ಠೇವಣಿಯಾಗಿ ಪಾವತಿಸಿದ ಮೇಲೆ ಗ್ರಂಥಾಲಯದ ಎರವಲು ಕಾರ್ಡುಗಳನ್ನು ನೀಡಲಾಗುವುದು.

- ಸ್ನಾತಕಪೂರ್ವ ಮತ್ತು ಸ್ನಾತಕೋತ್ತರ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಎರಡು ಎರವಲು ಚೀಟಿಗಳನ್ನು ನೀಡಲಾಗುತ್ತದೆ.

- ಒಂದು ಕಾರ್ಡಿಗೆ ಒಂದು ಗ್ರಂಥವನ್ನು ಪಡೆಯಬಹುದಾಗಿದೆ.ಪಡೆದ ಗ್ರಂಥವನ್ನು ೦೦ ದಿನಗಳವರೆವಿಗೂ ಬಳಸಿಕೊಳ್ಳಬಹುದು. ೦೦ ದಿನಗಳ ನಂತರ ಗ್ರಂಥಾಲಯಕ್ಕೆ ಹಿಂದಿರುಗಿಸದಿದ್ದಲ್ಲಿ ಒಂದು ದಿನಕ್ಕೆ ಒಂದು ಗ್ರಂಥಕ್ಕೆ ಒಂದು ರೂ.ನಂತೆ ದಂಡ ಶುಲ್ಕ ನೀಡಬೇಕಾಗುತ್ತದೆ.

- ಶೈಕ್ಷಣಿಕ ವರ್ಷದ ಕೊನೆಯಲ್ಲಿ ಅಂದರೆ, ಪರೀಕ್ಷೆ ಪ್ರಾರಂಭವಾಗುವ ೩೦ ದಿನಗಳ ಮುಂಚಿತವಾಗಿ ಎರವಲು ಪಡೆದಿರುವ ಗ್ರಂಥಗಳು ಮತ್ತು ಎರವಲು ಕಾರ್ಡುಗಳನ್ನು ಹಿಂದಿರುಗಿಸಲೇಬೇಕು. ತಪ್ಪಿದಲ್ಲಿ, ಪರೀಕ್ಷಾ ಪ್ರವೇಶಾತಿ ಪತ್ರವನ್ನು ನೀಡಲಾಗುವುದಿಲ್ಲ.

- ವಿಶ್ವವಿದ್ಯಾನಿಲಯದ ನಿಬಂಧನೆಗಳ ಪ್ರಕಾರ ವಿದ್ಯಾರ್ಥಿಗಳು ಗ್ರಂಥಾಲಯ ಬೇಬಾಕಿ ಪತ್ರವನ್ನು ಪಡೆಯಬೇಕಾದಲ್ಲಿ ಅವಶ್ಯವಾಗಿ ಗುರುತಿನ ಕಾರ್ಡನ್ನು ತೋರಿಸಿ, ಎರವಲು ಕಾರ್ಡುಗಳನ್ನು ಪಡೆದಿದ್ದಲ್ಲಿ ಅವುಗಳನ್ನು ಕಡ್ಡಾಯವಾಗಿ ಹಿಂದಿರುಗಿಸಬೇಕು.

<u>ಗ್ರಂಥಾಲಯ ಸೇವೆಗಳು</u> :

1. ಕೇಂದ್ರ ಕಚೇರಿಯಲ್ಲಿರುವಂತೆ, ಪ್ರಾದೇಶಿಕ ಕೇಂದ್ರಗಳು ಹಾಗು ವಿದ್ಯಾರ್ಥಿ ಕಲಿಕಾ ಕೇಂದ್ರಗಳಲ್ಲಿಯೂ ಕೂಡ ಲಭ್ಯವಿರುತ್ತದೆ.
2. ಗ್ರಂಥಾಲಯದಲ್ಲಿ ಓದುಗರಿಗೆ, ರೆಫರೆನ್ಸ್ ಮತ್ತು ರೆಫರಲ್ ಸೇವೆಗಳು, ಪ್ರಸ್ತುತ ಜಾಗೃತಿ ಸೇವೆ, ಒಪ್ಯಾಕ್ ಸೇವೆ, ಓರಿಯಂಟೇಷನ್ ಸೇವೆ, ಬಿಬ್ಲಿಯೋಗ್ರಾಫಿಕ್ ಸೇವೆ, ನ್ಯೂಸ್ ಪೇಪರ್ ಕ್ಲಿಪ್ಪಿಂಗ್ಸ್ ಸೇವೆ, ಛಾಯಾಪ್ರತಿ ಸೇವೆ, ಇತ್ಯಾದಿ ಸೇವೆಗಳನ್ನು ಕ.ರಾ.ಮು.ವಿ ಗ್ರಂಥಾಲಯವು ಒದಗಿಸುತ್ತದೆ.
3. ಇತರೆ ಸಂಪನ್ಮೂಲಗಳಾದ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಅಗತ್ಯತೆಗಳ ಪೂರೈಕೆಗೆ ಇಂಟರ್‌ನೆಟ್ ಸೌಲಭ್ಯ ಹೊಂದಿರುವ ಸುಸಜ್ಜಿತ ಕಂಪ್ಯೂಟರ್ ಲ್ಯಾಬ್ ಹೊಂದಿದೆ.
4. ಎಲ್ಲಾ ಕೆಲಸದ ದಿನಗಳಂದು ಬೆಳಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ಗ್ರಂಥಾಲಯವು ಕಾರ್ಯನಿರ್ವಹಿಸುತ್ತದೆ.
5. ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಶೈಕ್ಷಣಿಕ ಸಂಪರ್ಕ ಕಾರ್ಯಕ್ರಮಗಳು, ಹಾಗೂ ಪರೀಕ್ಷೆಗಳು ನಡೆಯುವ ಸಂದರ್ಭದಲ್ಲಿ ಬೆಳಗ್ಗೆ ೪.00 ಗಂಟೆಯಿಂದ ರಾತ್ರಿ ೪.00 ಗಂಟೆಯವರೆಗೆ ಹಾಗೂ ಸಾರ್ವಜನಿಕ ಸರ್ಕಾರಿ ರಜಾ ದಿನಗಳಂದು ಬೆಳಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ಕಾರ್ಯನಿರ್ವಹಿಸುತ್ತದೆ.
6. ಹೌಸ್ ಕೀಪಿಂಗ್ ಆಪರೇಶನ್ಸ್ ಮತ್ತು ಕೆಟಲಾಗ್ ಅನ್ನು ನ್ಯೂಜೆನ್‌ಲಿಬ್ ಇಂಟಿಗ್ರೇಟೆಡ್ ಲೈಬ್ರರಿ ಮ್ಯಾನೇಜ್ ಮೆಂಟ್ ತಂತ್ರಾಂಶದ ಮೂಲಕ ಗಣಕೀಕೃತಗೊಳಿಸಿದೆ.
7. ವೆಬ್ ಆಧಾರಿತ ಆನ್‌ಲೈನ್ ಪಬ್ಲಿಕ್ ಆಕ್ಸಸ್ ಕ್ಯಾಟಲಾಗ್ ಓದುಗರಿಗೆ ಒದಗಿಸಲಾಗುತ್ತಿದೆ.
8. ಗ್ರಂಥಾಲಯದ ವೆಬ್‌ಸೈಟ್ ನಲ್ಲಿ ಇ-ಪತ್ರಿಕೆಗಳು, ಇ-ಪುಸ್ತಕಗಳು, ಹಳೆಯ ಪ್ರಶ್ನೆಪತ್ರಿಕೆಗಳನ್ನು ಇತ್ಯಾದಿ ಮತ್ತು ಗ್ರಂಥಾಲಯವು ಆನ್‌ಲೈನ್ ಪಬ್ಲಿಕ ಆಕ್ಸಸ್ ಕ್ಯಾಟಲಾಗ್ ಲಿಂಕ್ ನಿಲುಕಿಸಿಕೊಳ್ಳಲು [http://ksoumysore.edu.in/library.php]ಸಂಪರ್ಕ ಕೊಂಡಿಯನ್ನು ಏರ್ಪಡಿಸಿದೆ.
9. ಓದುಗರು Knimbus ಎಂಬ ರಿಮೋಟ್ ಆಕ್ಸೆಸ್ ಸಾಫ್ಟ್‌ವೆರ್‌ನಿಂದ ಇ-ಪುಸ್ತಕಗಳು ಮತ್ತು ಇತರೆ ಇ-ಸಂಪನ್ಮೂಲಗಳನ್ನು https: //ksoumysuru.knimbus.com/# ವೆಬ್‌ಸೈಟ್‌ನಿಂದ ನೀವು ನಿಮ್ಮ e-mail ID ಮೂಲಕ ಲಾಗಿನ್ ಆಗಿ, ಗ್ರಂಥಾಲಯ ನೀಡಿರುವ ಪಾಸ್‌ವರ್ಡ್‌ನಿಂದ ಬಳಸಬಹುದಾಗಿರುತ್ತದೆ ಅಥವಾ ನಿಮ್ಮ ಮೊಬೈಲ್ ಸಾಧನದಲ್ಲಿ ನೀಡಿರುವ ಪಾಸ್‌ವಾರ್ಡ್‌ನಿಂದ ಬಳಸಬಹುದಾಗಿರುತ್ತದೆ. ಅಥವಾ ನಿಮ್ಮ ಮೊಬೈಲ್ ಸಾಧನದಲ್ಲಿ Google Play Store ನಿಂದ mLibrary ಅಪ್ಲಿಕೇಶನ್ ಅನ್ನು ಡೌನ್‌ಲೌಡ್ ಮಾಡಿ ಸ್ಥಾಪಿಸಿಕೊಂಡು ಇ-ರಿಸೋರ್ಸ್‌ಗಳನ್ನು ಬಳಸಬಹುದಾಗಿರುತ್ತದೆ.

ಗ್ರಂಥಾಲಯದ ಸೇವೆಗಳಿಗೆ ಸಂಬಂಧಿಸಿದಂತೆ ಯಾವುದೇ ಪ್ರಶ್ನೆಗಳನ್ನು ಹಾಗೂ ಅನಿಸಿಕೆಗಳನ್ನು ksoulibrary@gmail.com. ಇ-ಮೇಲ್ ಐ.ಡಿ ಗೆ ಕಳುಹಿಸಬಹುದು ಹಾಗೂ ದೂರವಾಣಿ ಸಂಖ್ಯೆ: 0821-2519943 ಆಂತರಿಕ ಸಂಪರ್ಕ 525 / 526 /529/530 ಅನ್ನು ಸಂಪರ್ಕಿಸಬಹುದು.

ಆರೋಗ್ಯ ಕೇಂದ್ರ :

ವಿದ್ಯಾರ್ಥಿಗಳು ವಿವಿ ಆವರಣದಲ್ಲಿ ತಂಗಿರುವಾಗ ಅವರ ತುರ್ತು ಮತ್ತು ತಕ್ಷಣದ ವೈದ್ಯಕೀಯ ಅಗತ್ಯಗಳಿಗೆ ವಿಶ್ವವಿದ್ಯಾನಿಲಯವು ವಿವಿ ಆವರಣದಲ್ಲಿ ಒಂದು ಆರೋಗ್ಯ ಕೇಂದ್ರವನ್ನು ಸ್ಥಾಪಿಸಿದೆ. ಕೇವಲ ಹೊರ ರೋಗಿ ವಿಭಾಗ (OPD)ಸೌಲಭ್ಯವಿದ್ದು, ವೈದ್ಯರು ಮತ್ತು ಇತರ ಸಿಬ್ಬಂದಿಗಳು ಕರ್ತವ್ಯದಲ್ಲಿ ನಿರತರಿರುತ್ತಾರೆ.

ಪುರುಷ ವಿದ್ಯಾರ್ಥಿ ವಸತಿ ನಿಲಯ :

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಪುರುಷ ವಿದ್ಯಾರ್ಥಿನಿಲಯದಲ್ಲಿ ಒಟ್ಟು 33 ಕೊಠಡಿಗಳಿವೆ. ಪ್ರತಿ ಕೊಠಡಿಯಲ್ಲಿ ಐದು ವಿದ್ಯಾರ್ಥಿಗಳು ಉಳಿದುಕೊಳ್ಳಬಹುದು. ಆದುದರಿಂದ ಈ ಸೌಲಭ್ಯವು ಒಮ್ಮೆಗೆ 165 ವಿದ್ಯಾರ್ಥಿಗಳಿಗೆ ಮಾತ್ರ ಲಭಿಸುವುದು. ಇಲ್ಲಿ ಉಳಿದುಕೊಳ್ಳಬಯಸುವ ವಿದ್ಯಾರ್ಥಿಗಳು ದಿನವೊಂದಕ್ಕೆ ಜಿ.ಎಸ್.ಟಿ. ಒಳಗೊಂಡಂತೆ ರೂ.177/- ಗಳನ್ನು ಪಾವತಿಸಬೇಕಾಗುತ್ತದೆ.

ಮಹಿಳಾ ವಿದ್ಯಾರ್ಥಿ ವಸತಿ ನಿಲಯ :

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿ ಮಹಿಳಾ ವಿದ್ಯಾರ್ಥಿನಿಯರ ವಸತಿಗಾಗಿ 09 ಕುಟೀರಗಳಿವೆ. ಪ್ರತಿ ಕುಟೀರದಲ್ಲಿ 12 ಮಂದಿ ವಿದ್ಯಾರ್ಥಿನಿಯರು ಉಳಿದುಕೊಳ್ಳಬಹ್ಮದಾದುದರಿಂದ ಈ ಸೌಲಭ್ಯವು ಒಮ್ಮೆಗೆ 108 ವಿದ್ಯಾರ್ಥಿನಿಯರಿಗೆ ಮಾತ್ರ ಲಭಿಸುವುದು. ಇಲ್ಲಿ ಉಳಿದುಕೊಳ್ಳಲು ಅಪೇಕ್ಷಿಸುವ ವಿದ್ಯಾರ್ಥಿನಿಯರು ದಿನವೊಂದಕ್ಕೆ ಜಿ.ಎಸ್.ಟಿ. ಒಳಗೊಂಡಂತೆ ರೂ.177/- ಗಳನ್ನು ಪಾವತಿಸಬೇಕಾಗುತ್ತದೆ.

ಕರಾಮುವಿಯು ತನ್ನ ಪರಿಮಿತಿಯಲ್ಲಿ ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ಮಾಡಿಕೊಡುತ್ತದೆ. ಮೊದಲು ಬಂದವರಿಗೆ ಆದ್ಯತೆ" ನೀತಿ ಆಧರಿಸಿ ವಸತಿ ಸೌಲಭ್ಯವನ್ನು ನೀಡಲಾಗುವುದು.ವಸತಿ ಸೌಲಭ್ಯ ದೊರೆಯದೆ ಇರುವವರು ವಸತಿಗಾಗಿ ತಮ್ಮದೇ ಆದ ವ್ಯವಸ್ಥೆಯನ್ನು ಮಾಡಿಕೊಳ್ಳುವುದು. ಕೊಠಡಿಯಲ್ಲಿರುವಾಗ ವಿಶ್ವವಿದ್ಯಾನಿಲಯದ ಆಸ್ತಿಪಾಸ್ತಿಗಳಿಗೆ ನಷ್ಟ ಉಂಟು ಮಾಡುವ ನಿಲಯಾರ್ಥಿಗಳನ್ನು ಶಿಸ್ತುಕ್ರಮಕ್ಕೊಳಪಡಿಸಿ ದಂಡನೆಗೆ ಗುರಿಪಡಿಸಲಾಗುವುದು.ವಸತಿ ಸೌಲಭ್ಯಕ್ಕೆ ಮತ್ತು ವಸತಿ ಶುಲ್ಕ ಪಾವತಿಗಾಗಿ ಕಚೇರಿ ವೇಳೆಯಲ್ಲಿ ಕರಾಮುವಿಯ ಅತಿಥಿ ಗೃಹದ ಕಚೇರಿಯನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ - 9740140533

ವಿಶ್ವವಿದ್ಯಾನಿಲಯದಲ್ಲಿರುವ ಇತರೆ ಸೌಲಭ್ಯಗಳು :

- ಸುಸಜ್ಜಿತ ಉಪಹಾರ ಗೃಹ
- ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ATM ಸೌಲಭ್ಯ
- ಅಂಚೆ ಕಚೇರಿ
- ವೈಫೈ ಸೌಲಭ್ಯ
- ಸುಸಜ್ಜಿತ, ಸುವ್ಯವಸ್ಥಿತ ಕ್ರೀಡಾಂಗಣ
- ಕುಡಿಯುವ ಶುದ್ಧ ನೀರಿನ ಘಟಕ

ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ಗುರಿ ಮತ್ತು ಉದ್ದೇಶ:

ಇದೊಂದು ಕರಾಮುವಿಯ ಮಹತ್ವಾಕಾಂಕ್ಷೆಯ ಪ್ರಯೋಗ. ಪದವಿ ಕೊಡುವುದಷ್ಟಕ್ಕೆ ವಿಶ್ವವಿದ್ಯಾನಿಲಯಗಳ ಕರ್ತವ್ಯ ಮುಗಿಯುವುದಿಲ್ಲ. ಅವಕಾಶವಂಚಿತರಿಗೆ ಅವರ ಕೈಮಿತಿಯ ವೆಚ್ಚದಲ್ಲಿ ಗುಣಮಟ್ಟದ ತರಬೇತಿ ನೀಡುವುದು ಹಾಗೂ ಅವರನ್ನು ಉದ್ಯೋಗಗಳಲ್ಲಿ ನೆಲೆಗೊಳಿಸುವುದು ವಿಶ್ವವಿದ್ಯಾನಿಲಯದ ಕರ್ತವ್ಯ ಎಂದು ಭಾವಿಸಿದೆ. ತಿಳಿವಿನ ಕೈ ತುತ್ತನ್ನು ಹಸಿದವರಿಗೆ ಹಂಚುವ, ಅರ್ಹರಿಗೆ ಅರಿವಿನ ಪ್ರಪಂಚದ ಬಾಗಿಲನ್ನು ತೆರೆಯುವ ಹಂಬಲ ಮತ್ತು ಕನಸನ್ನು ನನಸಾಗುವತ್ತ ಹಂಬಲದಿಂದ ಹುಟ್ಟಿಕೊಂಡ ಕೇಂದ್ರ. ಇಂದಿನ ಸ್ಪರ್ಧಾತ್ಮಕ ಪ್ರಪಂಚದಲ್ಲಿ ಸರಿಯಾದ

ಮಾರ್ಗದರ್ಶನವಿಲ್ಲದೆ ಅವಕಾಶವಂಚಿತರಾದವರಿಗೆ ತರಬೇತಿ, ಮಾರ್ಗದರ್ಶನ ನೀಡುವುದು ಈ ಕೇಂದ್ರದ ಮುಖ್ಯ ಗುರಿ. ತರಬೇತಿ ನೀಡುವ ಅವಧಿ 45 ರಿಂದ 50 ದಿನಗಳು.

ಬ್ಯಾಂಕಿಂಗ್ ಪರೀಕ್ಷೆಗಳು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಲೋಕಸೇವಾ ಆಯೋಗಗಳು ನಡೆಸುವ ಪರೀಕ್ಷೆಗಳಾದ ಐ.ಎ.ಎಸ್, ಕೆ.ಎ.ಎಸ್ ಮತ್ತಿತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಆಸಕ್ತರನ್ನು ಸಜ್ಜುಗೊಳಿಸುವುದು, ಎಫ್.ಡಿ.ಎ, ಎಸ್.ಡಿ.ಎ, ಪೊಲೀಸ್ ಸಬ್‌ಇನ್ಸ್‌ಪೆಕ್ಟರ್, ಪೊಲೀಸ್ ಪೇದೆ ಸ್ಪರ್ಧಾತ್ಮಕ ಪರೀಕ್ಷೆಗಳಿಂದ ಹಿಡಿದು ಸ್ಟ್ಯಾಫ್ ಸೆಲೆಕ್ಷನ್ ಕಮಿಷನ್ ನಡೆಸುವ ಪರೀಕ್ಷೆಗಳು ಹಾಗೂ ವಿಶ್ವವಿದ್ಯಾನಿಲಯದ ಧನ ಸಹಾಯ ಆಯೋಗದವರು ನಡೆಸುವ ಯು.ಜಿ.ಸಿ-ನೆಟ್ ಮತ್ತು ಕೆ-ಸೆಟ್ ಪರೀಕ್ಷೆಗಳಿಗೆ ತರಬೇತಿ ನೀಡುವುದು ಕೇಂದ್ರದ ಮುಖ್ಯ ಗುರಿ.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕನ್ನಡದ ವಿದ್ಯಾರ್ಥಿಗಳನ್ನು ಅದರಲ್ಲೂ ಗ್ರಾಮೀಣ ಅಭ್ಯರ್ಥಿಗಳನ್ನು ತಯಾರು ಮಾಡಲೆಂದೇ ವಿಶ್ವವಿದ್ಯಾನಿಲಯ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರವನ್ನು 2011-12ರ ಶೈಕ್ಷಣಿಕ ವರ್ಷದಲ್ಲಿ ಆರಂಭಿಸಿದೆ. ಐ.ಎ.ಎಸ್, ಕೆ.ಎ.ಎಸ್, ಬ್ಯಾಂಕ್ ಪರೀಕ್ಷೆಗಳು, ಎನ್‌ಇಟಿ, ಎಸ್‌ಎಲ್‌ಇಟಿ, ಪ್ರೌಢಶಾಲೆ, ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕ ಪರೀಕ್ಷೆಗಳಿಗೆ ಯಶಸ್ವಿಯಾಗಿ ತರಬೇತಿ ನೀಡುವುದು, ಜತೆಗೆ ನಿರಂತರವಾಗಿ ನಡೆಸುವ ಸ್ಪೋಕನ್ ಇಂಗ್ಲೀಷ್‌ಗೆ ಸಂಬಂಧಿಸಿದ ತರಬೇತಿಗಳು ಎಲ್ಲಾ ವಯೋಮಾನದವರನ್ನು ಆಕರ್ಷಿಸಲು ಕ್ರಮ ಕೈಗೊಳ್ಳುವುದು.

ಈ ಕೇಂದ್ರದಲ್ಲಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸೇವಾನಿರತ ಪ್ರಾಧ್ಯಾಪಕರುಗಳು, ರಾಜ್ಯ ಹಾಗೂ ಕೇಂದ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಐ.ಎ.ಎಸ್ ಮತ್ತು ಕೆ.ಎ.ಎಸ್ ಅಧಿಕಾರಿಗಳು ಮತ್ತು ವಿವಿಧ ವಿಶ್ವವಿದ್ಯಾನಿಲಯಗಳ ವಿಶ್ರಾಂತ ಕುಲಪತಿಗಳು ತರಬೇತಿಯ ಸಂಪನ್ಮೂಲ ವ್ಯಕ್ತಿಗಳಾಗಿ ತೊಡಗಿಸಿಕೊಳ್ಳಲು ಆಸಕ್ತಿ ವಹಿಸುತ್ತಾ ಬಂದಿರುತ್ತಾರೆ.

ಕರಾಮುವಿಯ ಸ್ಪರ್ಧಾತ್ಮಕ ತರಬೇತಿ ಕೇಂದ್ರವು ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಮತ್ತು ಮಾರ್ಗದರ್ಶನವನ್ನು ನೀಡುತ್ತದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: 0821-2515944.

<u>ಉದ್ಯೋಗ ಕೇಂದ್ರ</u> :

ವಿಶ್ವವಿದ್ಯಾನಿಲಯವು ಉದ್ಯೋಗ ಕೇಂದ್ರವನ್ನು ಹೊಂದಿದ್ದು ಅದು ಉದ್ಯೋಗ ಸಹಾಯವನ್ನು ಒದಗಿಸುತ್ತದೆ. ವಿದ್ಯಾರ್ಥಿಗಳಿಗೆ ಉದ್ಯೋಗ ಸಹಾಯವನ್ನು ಒದಗಿಸಲು ವಿಶ್ವವಿದ್ಯಾಲಯವು ಉದ್ಯೋಗ ಮೇಳಗಳನ್ನು ನಡೆಸುತ್ತದೆ. ಉದ್ಯೋಗ ಕೇಂದ್ರ ವಿವಿಧ ಉದ್ಯಮ/ಕಂಪನಿಗಳೊಂದಿಗೆ ನಿರಂತರ ಸಂಪರ್ಕವನ್ನು ಹೊಂದಿದೆ. ಅರ್ಹ ಅಭ್ಯರ್ಥಿಗಳಿಗೆ ಹುದ್ದೆಗಳನ್ನು ನೀಡಲಾಗುತ್ತಿದೆ.

ಕರಾಮುವಿಯ ಅರ್ಹ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಉದ್ಯೋಗಗಳನ್ನು ಒದಗಿಸುವ ಉದ್ದೇಶದಿಂದ ಉದ್ಯೋಗ ಕೇಂದ್ರವನ್ನು ಜುಲೈ 2019 ರಲ್ಲಿ ಆರಂಭಿಸಲಾಯಿತು. ನಂತರದ ದಿನಗಳಲ್ಲಿ ಉದ್ಯೋಗ ಕೇಂದ್ರದ ಉದ್ದೇಶಗಳನ್ನು ಕರ್ನಾಟಕದ ಎಲ್ಲಾ ಉದ್ಯೋಗ ಆಕಾಂಕ್ಷಿಗಳಿಗೆ ವಿಸ್ತರಿಸಲಾಯಿತು ಮೇಲಿನ ಉದ್ದೇಶಕ್ಕಾಗಿ 4 ಉದ್ಯೋಗ ಮೇಳಗಳನ್ನು ಒಳಗೊಂಡಂತೆ 1 ಮೆಗಾ ಜಾಬ್ ಮೇಳವು ಹೆಚ್ಚಿನ ಉದ್ಯೋಗವನ್ನು ಏರ್ಪಡಿಸಿದ್ದು 4000 ವಿದ್ಯಾರ್ಥಿಗಳಿಗೆ ಉದ್ಯೋಗ ದೊರೆತಿರುತ್ತದೆ.

ವಿಶ್ವವಿದ್ಯಾನಿಲಯವು 2 ಕಂಪನಿಗಳೊಂದಿಗೆ ಉದ್ಯೋಗ ಒಪ್ಪಂದಗಳಿಗೆ ಸಹಿ ಹಾಕಿದೆ, ಪ್ರಸ್ತುತ ಉದ್ಯೋಗ ಮತ್ತು ತರಬೇತಿ ಇಲಾಖೆ ಹಾಗು ತರಬೇತಿ ಉದ್ಯೋಗ ಮಂಡಳಿಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ, ಕರ್ನಾಟಕ ಸರ್ಕಾರ ಸುಮಾರು 50 ವಿದ್ಯಾರ್ಥಿಗಳನ್ನು 2 ವರ್ಷಗಳ ಕಾಲ ತಿಂಗಳಿಗೆ 10,000 ದಷ್ಟು ಅಪ್ರೆಂಟಿಷಿಪ್‌ಗಾಗಿ ಆಯ್ಕೆ ಮಾಡಲಾಗಿದೆ. ಕರ್ನಾಟಕ ಸರ್ಕಾರದ ಸಹಯೋಗದಲ್ಲಿ ರಾಜ್ಯ ಮಟ್ಟದ ಅಪ್ರೆಂಟಿಸ್ ಶಿಪ್

ಮೇಳವನ್ನು ಸಹ ಏರ್ಪಡಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಆಧಾರಿತ ವಿದ್ಯಾರ್ಥಿಗಳ ಹಾಗೂ ಎಲ್ಲಾ ಪದವಿ ಮತ್ತು ಸ್ನಾತಕೋತ್ತರ ಪದವೀಧರರಿಗೆ ತಿಂಗಳಿಗೆ ಕನಿಷ್ಠ 10,000/- ಸ್ಟೈಪಂಡ್‌ನೊಂದಿಗೆ ಅಪ್ರೆಂಟಿಸ್‌ಶಿಪ್ ತರಬೇತಿ ನೀಡಲು ಉದ್ಯೋಗ ಕೇಂದ್ರಯೋಜಿಸಿದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ : **ಉದ್ಯೋಗ ಕೇಂದ್ರ 9964697521.** ಕಲಿಕಾ ಸಾಮಗ್ರಿ, ಹಳೆಯ ಪ್ರಶ್ನೆಪತ್ರಿಕೆಗಳು ಮತ್ತು ಆಂತರಿಕ ನಿಬಂಧನೆಗಳ ಸಾಫ್ಟ್ ಕಾಪಿಗಳನ್ನು ಕೂಡ ಪಡೆಯಬಹುದಾಗಿದೆ.

ವಿಡಿಯೋ ಉಪನ್ಯಾಸ: ವಿವಿಧ ವಿಭಾಗಗಳು ಹಲವಾರು ವಿಷಯಗಳ ಬಗ್ಗೆ ವಿಡಿಯೋ ತರಗತಿಗಳನ್ನು ಅಭಿವೃದ್ಧಿಪಡಿಸಿದ್ದು, ಅವುಗಳು ಯೂಟ್ಯೂಬ್ ಚಾನಲ್‌ನಲ್ಲಿ ಲಭ್ಯವಿರುತ್ತದೆ.

ಕೆಎಸ್‌ಓಯು ರೇಡಿಯೋ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ತನ್ನದೇ ಆದ ರೇಡಿಯೋ ಸ್ಟೇಷನ್ ಹೊಂದಿದ್ದು, ಅದರ ಮೂಲಕ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತದೆ.

KSOU ಅಧಿಕೃತ ಯುಟ್ಯೂಬ್ ಚಾನೆಲ್:

ವೀಡಿಯೊ ರೆಕಾರ್ಡ್ ಮಾಡಿದ ತರಗತಿಗಳು KSOU ಅಧಿಕೃತ ಯುಟ್ಯೂಬ್ ಚಾನೆಲ್‌ನಲ್ಲಿ ಲಭ್ಯವಿದೆ. @ksoudrushyavahini6222- KSOU ದೃಶ್ಯವಾಹಿನಿ. ಆದ್ದರಿಂದ ವಿದ್ಯಾರ್ಥಿಗಳು ತಪ್ಪದೇ ಚಾನಲ್‌ಗೆ ಚಂದಾದಾರರಾಗಲು ತಿಳಿಸಲಾಗಿದೆ. ಈ ಚಾನಲ್‌ನಲ್ಲಿ ವಿದ್ಯಾರ್ಥಿಗಳು KSOUನ ಎಲ್ಲಾ ಅಧಿಸೂಚನೆಗಳು, ಸುದ್ದಿಗಳನ್ನು ಪಡೆಯಬಹುದು.

KSOU ರೇಡಿಯೊ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಎಲ್ಲಾ ವಿದ್ಯಾರ್ಥಿಗಳ ಅನುಕೂಲಕ್ಕಾಗಿ KSOU ರೇಡಿಯೊವನ್ನು ಪ್ರಾರಂಭಿಸಿದೆ, ಇದು ಎಲ್ಲಾ ವಿದ್ಯಾರ್ಥಿಗಳು ಮೊಬೈಲ್ ಅಪ್ಲಿಕೇಶನ್ ಮೂಲಕ ಕೇಳಬಹುದು. ಈ ರೇಡಿಯೋ ಮೂಲಕ ನುರಿತ ಪ್ರಾಧ್ಯಾಪಕರು, ಬಾಹ್ಯ ಸಂಪನ್ಮೂಲ ವ್ಯಕ್ತಿಗಳು ವಿದ್ಯಾರ್ಥಿಗಳಿಗೆ ಪಾಠ ಮತ್ತು ಪೂರಕ ಸಾಮಗ್ರಿಗಳನ್ನು ಪ್ರಸ್ತುತಪಡಿಸುತ್ತಿದ್ದಾರೆ.

ನಮ್ಮದು ಮುಕ್ತ ವಿಶ್ವವಿದ್ಯಾನಿಲಯವಾಗಿರುವುದರಿಂದ ನಾವು 2 ಗಂಟೆಗಳ ಕಾರ್ಯಕ್ರಮವನ್ನು 2 ಗಂಟೆಗಳ ಅವಧಿಯಲ್ಲಿ ಮರು-ಪ್ರಸಾರ ಮಾಡುತ್ತೇವೆ, ಎಲ್ಲಾ ವಿದ್ಯಾರ್ಥಿಗಳ ಆಲಿಸುವ ಸಮಯವನ್ನು ಗಮನದಲ್ಲಿರಿಸಿಕೊಳ್ಳುತ್ತೇವೆ.

ರೇಡಿಯೋ ಕೇಂದ್ರವನ್ನು ಕರ್ನಾಟಕ ಸರ್ಕಾರದ ಅಂದಿನ ಉನ್ನತ ಶಿಕ್ಷಣ ಸಚಿವರಾದ ಶ್ರೀ ಸಿ.ಎನ್. ಅಶ್ವಥನಾರಾಯಣ ಅವರು 07 ಏಪ್ರಿಲ್ 2022 ರಂದು ಪ್ರಾರಂಭಿಸಿದರು. ಅಂದಿನಿಂದ ರೇಡಿಯೋ ನಿರಂತರವಾಗಿ ಪ್ರಸಾರವಾಗುತ್ತಿದೆ.

ಗೌರವಾನ್ವಿತ ಕುಲಪತಿಗಳು ಮತ್ತು ಇತರ ಹಿರಿಯ ಅಧಿಕಾರಿಗಳು ಈ ರೇಡಿಯೋ ಪ್ರಸಾರಕ್ಕೆ ಸಾಧ್ಯವಿರುವ ಎಲ್ಲಾ ಸಮನ್ವಯ ಮತ್ತು ಮಾರ್ಗದರ್ಶನವನ್ನು ಒದಗಿಸುತ್ತಿದ್ದಾರೆ.

ವಿದ್ಯಾರ್ಥಿಗಳು KSOU ಅಧಿಕೃತ ವೆಬ್‌ಸೈಟ್‌ನಿಂದ ಈ ರೇಡಿಯೊ ಅಪ್ಲಿಕೇಷನ್ ಅನ್ನು ಡೌನ್‌ಲೋಡ್ ಮಾಡಬಹುದು ಮತ್ತು ಪಾಠಗಳನ್ನು ಆಲಿಸಬಹುದು.

KSOU ರೇಡಿಯೊ ಪಠ್ಯಕ್ರಮದ ಜೊತೆಗೆ ಸಾಕಷ್ಟು ಉಪಯುಕ್ತ ಮಾಹಿತಿ ಮತ್ತು ಪ್ರಕಟಣೆಗಳನ್ನು ಒದಗಿಸುತ್ತಿದೆ ವಿದ್ಯಾರ್ಥಿಗಳು ಸಮಾಜದ ವೇಗದ ಗತಿಯಲ್ಲಿ ಸಾಗುತ್ತಿರುವ ಈ ಸಮಯದಲ್ಲಿ KSOU ರೇಡಿಯೋ

ವಿದ್ಯಾರ್ಥಿಗಳಿಗೆ ಅವರು ಇರುವ ಜಾಗದಲ್ಲಿ ಪಾಠ ಮತ್ತು ಪಠ್ಯೇತರ ವಿಷಯಗಳನ್ನು ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿರುವುದು ಸಂತೋಷದ ಸಂಗತಿ.

ಸಿಎಂಕೆಕೆವೈ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ (ಸಿಎಂಕೆಕೆವೈ) ಯ ಸಹಯೋಗದೊಂದಿಗೆ ವಿದ್ಯಾರ್ಥಿಗಳಿಗೆ ವಿವಿಧ ವಿಷಯಗಳಲ್ಲಿ ಕೌಶಲ್ಯಾಧಾರಿತ ತರಗತಿಗಳನ್ನು ನಡೆಸುತ್ತದೆ. ಹೆಚ್ಚಿನ ವಿವರಗಳಿಗಾಗಿ ಈ ಯೋಜನೆಯ ನಿರ್ದೇಶಕರಾದ **ಪ್ರೊ.ನಿರಂಜನ್ ರಾಜ್.ಎಸ್** ಇವರನ್ನು ಸಂಪರ್ಕಿಸಬಹುದು.

15. ಪ್ರವೇಶಾತಿ ಶುಲ್ಕದ ಮಾಹಿತಿ

1. ಬಿ.ಪಿ.ಎಲ್. ಕಾರ್ಡ್ ಹೊಂದಿರುವ ಮಹಿಳಾ ಅಭ್ಯರ್ಥಿಗಳಿಗೆ ಬೋಧನಾ ಶುಲ್ಕದಲ್ಲಿ ಮಾತ್ರ ಶೇಕಡ 10% ರಷ್ಟು ವಿನಾಯಿತಿ ಇರುತ್ತದೆ.
2. ಡಿಫೆನ್ಸ್ ಹಾಗೂ ಎಕ್ಸ್ ಸರ್ವಿಸ್‌ಮನ್ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕದಲ್ಲಿ ಮಾತ್ರ ಶೇಕಡ 10% ರಿಯಾಯಿತಿ. ಅಂತಹ ವಿದ್ಯಾರ್ಥಿಗಳು ಅಗತ್ಯ ದಾಖಲಾತಿಗಳನ್ನು ಸಲ್ಲಿಸಬೇಕಿರುತ್ತದೆ.
3. ಆಟೋ / ಕ್ಯಾಬ್ ಚಾಲಕರು ಮತ್ತು ಅವರ ಪತ್ನಿ / ಮಕ್ಕಳಿಗೆ ಯು.ಜಿ. ಮತ್ತು ಪಿ.ಜಿ. ಪದವಿ ಶಿಕ್ಷಣ ಕ್ರಮಗಳಿಗೆ ಬೋಧನಾ ಶುಲ್ಕದಲ್ಲಿ ಶೇಕಡ 10% ರಷ್ಟು ರಿಯಾಯಿತಿ ಇರುತ್ತದೆ.
4. ಕೆ.ಎಸ್.ಆರ್.ಟಿ.ಸಿ. / ಬಿ.ಎಂ.ಟಿ.ಸಿ / ಎಂ.ಡಬ್ಲ್ಯೂ.ಕೆ.ಆರ್.ಟಿ.ಸಿ / ಕೆ.ಕೆ.ಆರ್.ಟಿ.ಸಿ ಯಲ್ಲಿನ ನೌಕರರುಗಳಿಗೆ ಯು.ಜಿ. ಮತ್ತು ಪಿ.ಜಿ. ಪದವಿ ಶಿಕ್ಷಣ ಕ್ರಮಗಳಿಗೆ ಬೋಧನಾ ಶುಲ್ಕದಲ್ಲಿ ಶೇಕಡ 10% ರಷ್ಟು ರಿಯಾಯಿತಿ ಇರುತ್ತದೆ.
5. ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರು, ಅವರ ಪತಿ/ಪತ್ನಿ ಮತ್ತು ಮಕ್ಕಳು (ಎರಡು ಮಕ್ಕಳಿಗೆ ಸೀಮಿತವಾದ ಹಾಗೆ) ವಿವಿ ನಿಲಯದ ಯಾವುದಾದರೂ ಅರ್ಹ ಕೋರ್ಸ್ ಅನ್ನು ಅಧ್ಯಯನ ಮಾಡಲು ಅವಕಾಶ ಕಲ್ಪಿಸಿ ಒಟ್ಟಾರೆ ಶುಲ್ಕದಲ್ಲಿ ಶೇಕಡ 10%ರಷ್ಟು ರಿಯಾಯಿತಿ.
6. ಕೋವಿಡ್ ಸಾಂಕ್ರಾಮಿಕ ರೋಗದಿಂದ ಮೃತರಾದ ಆ ತಂದೆ ತಾಯಿಯ ಮಕ್ಕಳಿಗೆ ಅವರು ಅರ್ಹತೆ ಹೊಂದಿ ಪ್ರವೇಶ ಬಯಸುವ ಆಯಾ ಕೋರ್ಸ್‌ಗಳ ಒಟ್ಟು ಪ್ರವೇಶಾತಿ ಶುಲ್ಕದಲ್ಲಿ ಶೇಕಡ 100%ರ ರಿಯಾಯಿತಿ.
7. ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ತೃತೀಯ ಲಿಂಗದ (Transgender) ವಿದ್ಯಾರ್ಥಿಗಳಿಗೆ ಪೂರ್ಣ ಶುಲ್ಕ ವಿನಾಯಿತಿ.
8. ಸರ್ಕಾರವು ಆರಿಂದಾರ್ಗೆ ನಿಗದಿಪಡಿಸಿರುವ ಹಾಗೂ ಚಾಲ್ತಿಯಲ್ಲಿರುವ ಆದೇಶಗಳನ್ವಯ ದೃಷ್ಟಿ ದೋಷವುಳ್ಳ ಅಭ್ಯರ್ಥಿಗಳಿಗೆ ಪೂರ್ಣ ಶುಲ್ಕ ವಿನಾಯಿತಿ ಇರುತ್ತದೆ(50% ಮೆಲ್ಪಟ್ಟು) (ಬಿ.ಇಡಿ ಮತ್ತು ಎಂ.ಬಿ.ಎ ಹೊರತುಪಡಿಸಿ)
9. ಕರ್ನಾಟಕದ ಹೊರಗೆ ವಾಸಿಸುವ ಅಥವಾ ವಿದ್ಯಾಭ್ಯಾಸ ಮಾಡಿರುವ ಅಭ್ಯರ್ಥಿಗಳು ಅರ್ಹತಾ ಶುಲ್ಕ 2,200/-ರೂ. ಗಳನ್ನು ಪಾವತಿಸಬೇಕು.
10. ಒಂದಕ್ಕಿಂತ ಹೆಚ್ಚಿನ ರಿಯಾಯಿತಿಗೆ ಅರ್ಹತೆಯುಳ್ಳ ವಿದ್ಯಾರ್ಥಿಗಳು ಪ್ರವೇಶ ಬಯಸಿದಲ್ಲಿ ಹೆಚ್ಚಿನ ಮೊತ್ತದ ರಿಯಾಯಿತಿಯುಳ್ಳ ಸೌಲಭ್ಯದ ಅಡಿಯಲ್ಲಿ ಪ್ರವೇಶಾತಿಗೆ ಪರಿಗಣಿಸಲಾಗುವುದು.
11. ಕರಾಮುವಿ ನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು (ಅವರ ಪತಿ / ಪತ್ನಿ) ಮತ್ತು ಅವರ ಇಬ್ಬರು ಮಕ್ಕಳಿಗೆ ವಿಶ್ವವಿದ್ಯಾನಿಲಯದ ಯಾವುದಾದರು ಯು.ಜಿ / ಪಿ.ಜಿ ಶಿಕ್ಷಣ ಕ್ರಮಕ್ಕೆ ಪ್ರವೇಶಾತಿ ಪಡೆದಲ್ಲಿ ಒಟ್ಟಾರೆ ಶುಲ್ಕದಲ್ಲಿ ಶೇ 10 ರಷ್ಟು ರಿಯಾಯಿತಿ ಪಡೆಯಲು ಅರ್ಹರಾಗಿರುತ್ತಾರೆ.
12. ಹಿರಿಯ ವಿದ್ಯಾರ್ಥಿಗಳ ಸಂಘದ ಶುಲ್ಕ (Alumni Fee) ರೂ:550/-
13. ಪ್ರವೇಶಾತಿ ಸಂಸ್ಕರಣ ಶುಲ್ಕ ರೂ.550/–

16. ಪರೀಕ್ಷೆ ಕುರಿತ ಮಾಹಿತಿ

ಅ. ಪರೀಕ್ಷಾ ನೀತಿ:

- **ವಾರ್ಷಿಕ ಪರೀಕ್ಷೆ**

  ಗ್ರಾಜುಯೇಷನ್ ಬೇಸ್ಡ್ ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸುಗಳಪದವಿ ಶಿಕ್ಷಣ ಕ್ರಮಕ್ಕೆ ವಿಶ್ವವಿದ್ಯಾನಿಲಯವು ಪ್ರತಿ ಶೈಕ್ಷಣಿಕ ವರ್ಷದ ಅಂತ್ಯದಲ್ಲಿ ಪರೀಕ್ಷೆಗಳನ್ನು ನಡೆಸುತ್ತದೆ. ಗ್ರಾಜುಯೇಷನ್ ಬೇಸ್ಡ್ ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸುಗಳಪರೀಕ್ಷೆಗಳಿಗೆ ಪೂರಕ ಪರೀಕ್ಷೆಯನ್ನು ನಡೆಸಲಾಗುವುದಿಲ್ಲ.

- **ಶಿಕ್ಷಣಕ್ರಮ ಪೂರೈಸಲು ನಿಗದಿತ ಅವಧಿ**

  ವಿದ್ಯಾರ್ಥಿಗಳು ಶಿಕ್ಷಣ ಕ್ರಮವನ್ನು N + 2 ವರ್ಷಗಳಲ್ಲಿ (ಅಂದರೆ ಶಿಕ್ಷಣಕ್ರಮದ ಅವಧಿ ಮತ್ತು ಹೆಚ್ಚಿಗೆ 2 ವರ್ಷಗಳು) ಪೂರ್ಣಗೊಳಿಸಿಕೊಳ್ಳಬೇಕು.

- **ಪರೀಕ್ಷಾ ಕ್ರಮ**

  ಪ್ರಥಮ ಬಾರಿಗೆ ಪರೀಕ್ಷೆಗೆ (ಪ್ರವೇಶಾತಿ ಪಡೆದ ವರ್ಷ) ಹಾಜರಾಗುವ ಎಲ್ಲಾ ವಿದ್ಯಾರ್ಥಿಗಳು ಎಲ್ಲಾ ಪತ್ರಿಕೆಗಳಿಗೂ (ಇಡೀ ಪರೀಕ್ಷೆಗೆ) ನೋಂದಾಯಿಸಿಕೊಳ್ಳಬೇಕು.

- **ಪರೀಕ್ಷಾ ಕೇಂದ್ರಗಳು**

  ವಿದ್ಯಾರ್ಥಿಗಳು ಎಷ್ಟು ಸಂಖ್ಯೆಯಲ್ಲಿ ದಾಖಲಾತಿ ಹೊಂದಿದ್ದಾರೆ ಎಂಬುದರ ಆಧಾರದ ಮೇಲೆ ವಿಶ್ವವಿದ್ಯಾನಿಲಯವು ಪರೀಕ್ಷಾ ಕೇಂದ್ರವನ್ನು ಗುರುತಿಸುತ್ತದೆ.ಇಂತಹ ಪರೀಕ್ಷಾ ಕೇಂದ್ರಗಳ ಜೊತೆಗೆ, ಪರೀಕ್ಷಾ ಸುತ್ತೋಲೆಯಲ್ಲಿ ಅಧಿಸೂಚಿಸಿರುವ ಇತರ ಸಂಸ್ಥೆಗಳಲ್ಲಿ ಪರೀಕ್ಷೆ ನಡೆಸಲಾಗುತ್ತದೆ. ಪರೀಕ್ಷಾ ಕೇಂದ್ರಗಳಲ್ಲಿ ಏನಾದರೂ ಬದಲಾವಣೆಗಳಾದರೆ ಅದನ್ನು ಕ.ರಾ.ಮು.ವಿ.ಯ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸಲಾಗುವುದು.(www.ksoumysuru.ac.in) ಪೂರಕ ಪರೀಕ್ಷೆಗಳಿಗೆ ಕಡಿಮೆ ಪರೀಕ್ಷಾ ಕೇಂದ್ರಗಳಿರುತ್ತವೆ. ಇದು ವಿದ್ಯಾರ್ಥಿಗಳ ಸಂಖ್ಯೆಯ ಮೇಲೆ ಆಧಾರಿತವಾಗಿರುತ್ತದೆ.

- **ಪತ್ರಿಕೆ ವಿನಾಯಿತಿ**

  ಸ್ನಾತಕ ಮತ್ತು ಸ್ನಾತಕೋತ್ತರ ಶಿಕ್ಷಣಕ್ರಮಗಳಿಗೆ ವಿಶ್ವವಿದ್ಯಾನಿಲಯದ ಅಧ್ಯಾದೇಶದಂತೆ ಪತ್ರಿಕೆ ವಿನಾಯಿತಿ ನೀಡಲಾಗಿದೆ.

- **ಗ್ರಾಜುಯೇಷನ್ ಬೇಸ್ಡ್ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸುಗಳ ಶಿಕ್ಷಣಕ್ರಮದ ಫಲಿತಾಂಶ ಘೋಷಣೆ**

  ಅಭ್ಯರ್ಥಿಗಳು ವಾರ್ಷಿಕ ಪರೀಕ್ಷೆಯಲ್ಲಿ ಪ್ರತಿ ಪತ್ರಿಕೆಯಲ್ಲಿ ಕನಿಷ್ಠ 28 ಅಂಕಗಳು ಮತ್ತು ಎಲ್ಲಾ ಪತ್ರಿಕೆಗಳಲ್ಲಿ ಸರಾಸರಿ ಶೇ.35 ಅಂಕಗಳನ್ನು ಪಡೆಯಲೇಬೇಕು.ಯಾವ ವಿದ್ಯಾರ್ಥಿಗಳು 35 ಅಂಕಗಳಿಗಿಂತ ಕಡಿಮೆ ಪಡೆಯುತ್ತಾರೋ ಅವರನ್ನು ಪರೀಕ್ಷೆಯಲ್ಲಿ ಅನುತ್ತೀರ್ಣರೆಂದು ಪರಿಗಣಿಸಲಾಗುತ್ತದೆ.ಇಂತಹ ಅಭ್ಯರ್ಥಿಗಳು ಅನುತ್ತೀರ್ಣರಾದ ಪತ್ರಿಕೆಗಳಿಗೆ ಪುನಃ ಪರೀಕ್ಷೆಗೆ ಹಾಜರಾಗಬೇಕು.

- **ಗ್ರಾಜುಯೇಟ್ ಬೇಸ್ಡ್ ಡಿಪ್ಲೊಮಾ, ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸುಗಳ ಶಿಕ್ಷಣಕ್ರಮದ ಫಲಿತಾಂಶ ಘೋಷಣೆ**

  ಅಭ್ಯರ್ಥಿಗಳು ವಾರ್ಷಿಕ ಪರೀಕ್ಷೆಯಲ್ಲಿ ಪ್ರತಿ ಪತ್ರಿಕೆಯಲ್ಲಿ 32 ಅಂಕಗಳು ಮತ್ತು ಎಲ್ಲಾ ಪತ್ರಿಕೆಗಳಲ್ಲಿ ಸರಾಸರಿ ಶೇ 40 ಅಂಕಗಳನ್ನು ಪಡೆಯಲೇಬೇಕು.ಯಾವ ವಿದ್ಯಾರ್ಥಿಗಳು ಶೇ.40 ಅಂಕಗಳಿಗಿಂತ ಕಡಿಮೆ ಪಡೆಯುತ್ತಾರೋ ಅವರನ್ನು ಪರೀಕ್ಷೆಯಲ್ಲಿ ಅನುತ್ತೀರ್ಣರೆಂದು ಪರಿಗಣಿಸಲಾಗುತ್ತದೆ.ಇಂತಹ ಅಭ್ಯರ್ಥಿಗಳು ಅನುತ್ತೀರ್ಣರಾದ ಪತ್ರಿಕೆಗಳಿಗೆ ಪುನಃ ಪರೀಕ್ಷೆಗೆ ಹಾಜರಾಗಬೇಕು.

- **ಕೃಪಾಂಕ ನೀತಿ**

  ಕೃಪಾಂಕಗಳ ನೀಡುವಿಕೆಯು ವಿಶ್ವವಿದ್ಯಾನಿಲಯದ ನಿಯಮಾನುಸಾರ ಇರುತ್ತದೆ.

- **ಸ್ನಾತಕೋತ್ತರ ಪದವಿ ಸರ್ಟಿಫಿಕೇಟ್, ಡಿಪ್ಲೊಮಾ ಮತ್ತು ಸ್ನಾತಕಪೂರ್ವ ಪದವಿ ಸರ್ಟಿಫಿಕೇಟ್ ಕೋರ್ಸುಗಳ ಶಿಕ್ಷಣ ಕ್ರಮಗಳ ಶ್ರೇಣಿ ಪದ್ಧತಿ**

ಪಡೆದ ಒಟ್ಟು ಅಂಕಗಳು (ಶೇಕಡಾವಾರು)	ಗುಣಮಟ್ಟ	ಗಣಾಂಶ	
75 % ಅಥವಾ ಮೇಲ್ಪಟ್ಟು	ಅತ್ಯುತ್ತಮ(ಎಕ್ಸಲೆಂಟ್)	ಎ	ಉನ್ನತ ಶ್ರೇಣಿ
60-74%	ತುಂಬಾ ಉತ್ತಮ(ವೆರಿ ಗುಡ್)	ಬಿ	ಪ್ರಥಮ ದರ್ಜೆ
50-59%	ಉತ್ತಮ	ಸಿ	ದ್ವಿತೀಯ ದರ್ಜೆ
35-49%	ತೃಪ್ತಿಕರ	ಡಿ	ಉತ್ತೀರ್ಣ
35 % ಕ್ಕಿಂತ ಕಡಿಮೆ	ಅನುತ್ತೀರ್ಣ	ಇ	ಅನುತ್ತೀರ್ಣ

- ಬಿ.ಎ. ನ ಗುಂಪು-1 ಮತ್ತು 2ನೇ ಕೋರ್ಸ್‌ಗಳಿಗೆ ದರ್ಜೆಯನ್ನು ಘೋಷಿಸುವುದಿಲ್ಲ.
- ಬಿ.ಎ. ನ ಗುಂಪು-3 ರ ಕೋರ್ಸ್‌ಗಳಿಗೆ ಮಾತ್ರ ದರ್ಜೆಯನ್ನು ಘೋಷಿಸಲಾಗುತ್ತದೆ.

ಮರು ಮೌಲ್ಯಮಾಪನ ಮತ್ತು ಉತ್ತರ ಪತ್ರಿಕೆಯ ಛಾಯಾ ಪ್ರತಿ

ವಿಶ್ವವಿದ್ಯಾನಿಲಯದ ವೆಬ್‌ಸೈಟ್ (www.ksoumysore.karnataka.gov.in) ನಲ್ಲಿ ಫಲಿತಾಂಶ ಪ್ರಕಟಣೆಗೊಂಡ 14 ದಿನಗಳ ಒಳಗಾಗಿ ಪಿ.ಜಿ.ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸುಗಳಶಿಕ್ಷಣ ಕ್ರಮಗಳ ವಿದ್ಯಾರ್ಥಿಗಳು ಮರು ಮೌಲ್ಯಮಾಪನಕ್ಕೆ ಮತ್ತು ಉತ್ತರ ಪತ್ರಿಕೆಯ ಛಾಯಾ ಪ್ರತಿಗೆ ಇವುಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ಇರುತ್ತದೆ.ಅರ್ಜಿಗಳನ್ನು **ಕುಲಸಚಿವರು (ಪರೀಕ್ಷಾಂಗ), ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು–6,** ಇವರಿಗೆ ನೋಂದಾಯಿತ ಅಂಚೆಯ ಮೂಲಕ ಸಲ್ಲಿಸಬೇಕು.

ಫಲಿತಾಂಶದ ಉತ್ತಮೀಕರಣ (ಸ್ನಾತಕೋತ್ತರ ಶಿಕ್ಷಣಕ್ರಮಗಳಿಗೆ)

ಶಿಕ್ಷಣಕ್ರಮವನ್ನು ಪೂರೈಸಿದ ಅಭ್ಯರ್ಥಿಯು ಫಲಿತಾಂಶವನ್ನು ತಿರಸ್ಕರಿಸದೆ ಫಲಿತಾಂಶವನ್ನು ಉತ್ತಮೀಕರಿಸಿಕೊಳ್ಳಲು ಪುನಃ ಪರೀಕ್ಷೆ ಬರೆಯಲು ಅವಕಾಶವಿರುತ್ತದೆ (ಮೊದಲ ವರ್ಷದ ಅಥವಾ ಎರಡನೇ ವರ್ಷದ ಅಥವಾ ಎರಡೂ ವರ್ಷಗಳ ಎಲ್ಲಾ ಪತ್ರಿಕೆಗಳನ್ನು ತೆಗೆದುಕೊಳ್ಳಬೇಕು).ಇದು ಆಧ್ಯಾದೇಶದ ನಿಯಮಗಳಿಗೆ ಅನುಗುಣವಾಗಿರುತ್ತದೆ.

ಸ್ನಾತಕೋತ್ತರ ಪದವಿ ಸರ್ಟಿಫಿಕೇಟ್, ಡಿಪ್ಲೊಮಾ ಮತ್ತು ಸ್ನಾತಕಪೂರ್ವ ಪದವಿ ಸರ್ಟಿಫಿಕೇಟ್ ಕೋರ್ಸುಗಳ ವಾರ್ಷಿಕ ಪರೀಕ್ಷೆ ತೆಗೆದುಕೊಳ್ಳಲು ಅರ್ಹತೆ

ಯಾವುದೇ ಶಿಕ್ಷಣಕ್ರಮದಲ್ಲಿ ವಾರ್ಷಿಕ ಹಾಗೂ ಪೂರಕ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಬೇಕಾದರೆ, ವಿದ್ಯಾರ್ಥಿಗಳು ಈ ಕೆಳಗೆ ನಮೂದಿಸಿರುವ ನಿಬಂಧನೆಗಳನ್ನು ಪೂರೈಸಿರಬೇಕು.

1) ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಶಿಕ್ಷಣಕ್ರಮ, ಬೋಧನಾ ಶುಲ್ಕವನ್ನು ಮಾತ್ರ ಪಾವತಿಸಿರಬೇಕು
2) ನಿಗದಿತ ಶಿಕ್ಷಣಕ್ರಮವನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಿರಬೇಕು.
3) ನಿಗದಿತ ದಿನಾಂಕದೊಳಗೆ ಪರೀಕ್ಷಾ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಿರಬೇಕು.
4) ಪ್ರವೇಶಾತಿಯು ವಿಶ್ವವಿದ್ಯಾನಿಲಯದಿಂದ ಅನುಮೋದನೆಗೊಂಡಿರಬೇಕು.

ಸ್ನಾತಕೋತ್ತರ ಪದವಿ ಸರ್ಟಿಫಿಕೇಟ್, ಡಿಪ್ಲೊಮಾ ಮತ್ತು ಸ್ನಾತಕಪೂರ್ವ ಪದವಿ ಸರ್ಟಿಫಿಕೇಟ್ ಕೋರ್ಸುಗಳ ಪರೀಕ್ಷಾ ವೇಳಾಪಟ್ಟಿ :

ಪ್ರತಿ ಶಿಕ್ಷಣ ಕ್ರಮದ ಪರೀಕ್ಷೆಯ ದಿನಾಂಕ ಮತ್ತು ಸಮಯವನ್ನು ತಿಳಿಸುವ ಪರೀಕ್ಷಾ ವೇಳಾಪಟ್ಟಿಯನ್ನು ಎಲ್ಲ ಗ್ರಾಜುಯೇಷನ್ ಬೇಸ್ಡ್ ಡಿಪ್ಲೊಮಾ, ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸುಗಳ ವಿದ್ಯಾರ್ಥಿಗಳಿಗೆ 15 ದಿನಗಳ ಮುಂಚಿತವಾಗಿ ಕಳುಹಿಸಲಾಗುವುದು. ಪರೀಕ್ಷಾ ಕೇಂದ್ರ ಅಥವಾ ಕರಾಮುವಿಯ ವೆಬ್‌ಸೈಟ್ (www.ksoumysore.karnataka.gov.in) ಸಂಪರ್ಕಿಸುವ

ಮೂಲಕ ಪಡೆಯಬಹುದು. ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ವೇಳಾಪಟ್ಟಿಯನ್ನು ಕಳುಹಿಸಲಾಗುವುದಿಲ್ಲ.

ಅಂಕಪಟ್ಟಿ

ವಿಶ್ವವಿದ್ಯಾನಿಲಯವು ಆಧಾರ್ ಆಧಾರಿತ ಡಿಜಿಟಲ್ ಮಾರ್ಕ್ಸ್ ಕಾರ್ಡ್‌ಗಳು ಮತ್ತು ಘಟಿಕೋತ್ಸವ ಪ್ರಮಾಣ ಪತ್ರವನ್ನು ಆನ್‌ಲೈನ್ ಮೂಲಕ ನೀಡುತ್ತದೆ. ಅಂತಹ ಪ್ರತಿಗಳು ರಾಷ್ಟ್ರೀಯ ಶೈಕ್ಷಣಿಕ ಠೇವಣಿಯಲ್ಲಿ (NAD) ಲಭ್ಯವಿರುತ್ತದೆ

ರ್‍ಯಾಂಕ್ ಘೋಷಣೆಯ ನಿಯಮಗಳು :

1. ಪುನರಾವರ್ತಿತ ವಿದ್ಯಾರ್ಥಿಗಳು ರ್‍ಯಾಂಕ್ ಪಡೆಯಲು ಅರ್ಹರಾಗಿರುವುದಿಲ್ಲ.
2. ದರ್ಜೆ ಉತ್ತಮೀಕರಣ (CIG) ಅಂಕ ಪಡೆದ ವಿದ್ಯಾರ್ಥಿಗಳು ಮತ್ತು ಕೃಪಾಂಕ ಪಡೆದ ವಿದ್ಯಾರ್ಥಿಗಳು ರ್‍ಯಾಂಕ್ ಪಡೆಯಲು ಅರ್ಹರಾಗಿರುವುದಿಲ್ಲ.
3. ಗರಿಷ್ಟ 10 ರ್‍ಯಾಂಕ್ ನೀಡಲು ಮಾತ್ರ ಅವಕಾಶವಿರುತ್ತದೆ (ಅಥವಾ ಒಟ್ಟಾರೆ ಶೇ. 10 ರಷ್ಟು ಅಭ್ಯರ್ಥಿಗಳು).

ಅಭ್ಯರ್ಥಿಗಳಿಗೆ ಪರೀಕ್ಷೆ ಕುರಿತ ಮಾಹಿತಿ

- ವಿದ್ಯಾರ್ಥಿಗಳು ಪರೀಕ್ಷಾ ಅಧಿಸೂಚನೆಯಲ್ಲಿ ನೀಡಿರುವ ಸೂಚನೆಗಳನ್ನು ಎಚ್ಚರಿಕೆಯಿಂದ ಓದತಕ್ಕದ್ದು.
- ವಿದ್ಯಾರ್ಥಿಗಳು ಅವರಿಗೆ ನಿಗದಿತವಾದ ಪರೀಕ್ಷಾ ಕೇಂದ್ರದಲ್ಲಿ ಮಾತ್ರ ಪರೀಕ್ಷೆಯನ್ನು ಬರೆಯಬೇಕು. ವಿಶ್ವವಿದ್ಯಾನಿಲಯದ ಕುಲಸಚಿವರು (ಪರೀಕ್ಷಾಂಗ) ಇವರ ನಿರ್ದಿಷ್ಟ ಅನುಮತಿ ಪಡೆಯದೆ ಯಾವುದೇ ಇತರ ಕೇಂದ್ರಗಳಲ್ಲಿ ಪರೀಕ್ಷೆಯನ್ನು ತೆಗೆದುಕೊಳ್ಳುವಂತಿಲ್ಲ.
- ಒಮ್ಮೆ ಆಯ್ಕೆ ಮಾಡಿದ ಕೇಂದ್ರವನ್ನು ಯಾವುದೇ ಕಾರಣಕ್ಕೂ ಬದಲಾಯಿಸುವುದಿಲ್ಲ. ಒಂದು ವೇಳೆ ಅನಿವಾರ್ಯ ಕಾರಣಗಳಿಂದಾಗಿ ವಿದ್ಯಾರ್ಥಿಯು ಪರೀಕ್ಷಾಕೇಂದ್ರವನ್ನು ಬದಲಾಯಿಸಿಕೊಳ್ಳಬೇಕಾದರೆ ಕುಲಸಚಿವರು (ಪರೀಕ್ಷಾಂಗ) ಇವರ ಅನುಮತಿಯನ್ನು ಪಡೆಯಬೇಕು. ನಿಗದಿ ಪಡಿಸಿದ ಶುಲ್ಕವನ್ನು ಪಾವತಿಸಬೇಕು. ಪರೀಕ್ಷಾ ಫಲಿತಾಂಶವನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್ (www.ksoumysore.karnataka.gov.in) ನಲ್ಲಿ ಪ್ರಕಟಿಸಲಾಗುವುದು.
- ಪರೀಕ್ಷಾ ಶುಲ್ಕವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಗಳ ಮುಖಾಂತರ ಪಾವತಿಸಬೇಕು. ಒಮ್ಮೆ ಪಾವತಿಸಲಾದ ಶುಲ್ಕವನ್ನು ಯಾವುದೇ ಕಾರಣಕ್ಕೂ ಮರು ಪಾವತಿಸಲಾಗುವುದಿಲ್ಲ. ವಿದ್ಯಾರ್ಥಿಯು ನಿರ್ದಿಷ್ಟ ಪರೀಕ್ಷೆಗೆ ಹಾಜರಾಗದಿದ್ದರೂ ಪರೀಕ್ಷಾ ಶುಲ್ಕವನ್ನು ಮರುಪಾವತಿ ಮಾಡುವುದಿಲ್ಲ ಅಥವಾ ಮರು ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ.
- ವಿದ್ಯಾರ್ಥಿಗಳು ಪರೀಕ್ಷೆಗೆ ಮೂರು ದಿನ ಮುಂಚಿತವಾಗಿ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಂದ ಪ್ರವೇಶ ಪತ್ರಗಳನ್ನು ಪಡೆಯತಕ್ಕದ್ದು ಹಾಗೂ ಕರಾಮುವಿ ವೆಬ್‌ಸೈಟ್ (www.ksoumysore.karnataka.gov.in) ನಿಂದಲೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಯಾವ ಅಭ್ಯರ್ಥಿಗಳಿಗೂ ಪ್ರವೇಶ ಪತ್ರವನ್ನು ಅಂಚೆಯ ಮೂಲಕ ರವಾನಿಸುವುದಿಲ್ಲ.
- ವಲಸೆ ಪ್ರಮಾಣ ಪತ್ರವನ್ನು ಪಡೆಯಲು ವಿದ್ಯಾರ್ಥಿಯು ಕುಲಸಚಿವ (ಪರೀಕ್ಷಾಂಗ), ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು – 06, ಇವರಿಗೆ ಅರ್ಜಿ ಸಲ್ಲಿಸಬೇಕು. ನಿಗದಿತ ಅರ್ಜಿಯನ್ನು ಗೊತ್ತುಪಡಿಸಿದ ಅಂಕಪಟ್ಟಿಯ ನೆರಳಚ್ಚು ಪತ್ರಿ ಮತ್ತು ಶುಲ್ಕ ಪಾವತಿ ಮಾಡಿದ ಚಲನ್ ಜೊತೆ ಲಗತ್ತಿಸಿ ಕಳುಹಿಸಬೇಕು.
- ವಿಶ್ವವಿದ್ಯಾನಿಲಯದಿಂದ ಫಲಿತಾಂಶ ಘೋಷಣೆಯಾದ ಮೇಲೆ ನಿಗದಿತ ಶುಲ್ಕಗಳನ್ನು ಪಾವತಿ ಮಾಡಿ ತೇರ್ಗಡೆಯಾದ ಅಂಕಪಟ್ಟಿಗಳ ಛಾಯಾ ಪ್ರತಿಗಳೊಂದಿಗೆ ಅರ್ಜಿ ಸಲ್ಲಿಸಿದಲ್ಲಿ ಮಾತ್ರ

ತಾತ್ಕಾಲಿಕ ತೇರ್ಗಡ ಪ್ರಮಾಣ ಪತ್ರ (Provisional Pass Certificate), ತಾತ್ಕಾಲಿಕ ಪ್ರಮಾಣ ಪತ್ರವನ್ನು ಕುಲಸಚಿವ (ಪರೀಕ್ಷಾಂಗ) ಇವರು ವಿದ್ಯಾರ್ಥಿಯ ಕೋರಿಕೆಯ ಮೇರೆಗೆ ವಿತರಿಸುವರು.

- ಎಲ್ಲಾ ತರಹದ ಸುತ್ತೋಲೆಗಳು, ಪರೀಕ್ಷಾ ಪ್ರಕಟಣೆಗಳು ಇನ್ನಿತರ ಪತ್ರ ವ್ಯವಹಾರಗಳನ್ನು ಸಾಮಾನ್ಯ ಅಂಚೆ ಮೂಲಕ ವಿದ್ಯಾರ್ಥಿಗಳಿಗೆ ರವಾನಿಸಲಾಗುವುದು. ಅರ್ಜಿ, ಸುತ್ತೋಲೆ, ಪ್ರಕಟಣೆ ಮತ್ತಿತರ ಮಾಹಿತಿಗಳನ್ನು ಕಲಿಕಾರ್ಥಿ ಸಹಾಯ ಕೇಂದ್ರ, ಪ್ರಾದೇಶಿಕ ಕೇಂದ್ರ ಅಥವಾ ಕೇಂದ್ರ ಕಚೇರಿಯಿಂದಲು ಪಡೆಯಬಹುದಾಗಿದೆ. ವಿದ್ಯಾರ್ಥಿಗಳು ಕಾಲ ಕಾಲಕ್ಕೆ ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಾಣಕ್ಕೆ ಭೇಟಿ ನೀಡಿ ನೂತನ ಮಾಹಿತಿಗಳನ್ನು ಪಡೆಯಬಹುದು.
- ಅಂಕಪಟ್ಟಿಯನ್ನು ವಿಶ್ವವಿದ್ಯಾನಿಲಯದಿಂದ ವಿದ್ಯಾರ್ಥಿಗಳ ವಿಳಾಸಕ್ಕೆ ನೋಂದಾಯಿತ ಅಂಚೆ/ಸ್ಪೀಡ್ ಪೋಸ್ಟ್ ಮೂಲಕ ಕಳುಹಿಸಿಕೊಡಲಾಗುವುದು. 50 ದಿನಗಳ ಅವಧಿಯೊಳಗೆ ಅಂಕಪಟ್ಟಿ ತಲುಪದಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ವೆಬ್‌ಸೈಟ್ ಫಲಿತಾಂಶದ ಪ್ರತಿಯನ್ನು ಲಗತ್ತಿಸಿ ಅಗತ್ಯ ಕ್ರಮ ಕೈಗೊಳ್ಳಲು ಕೋರಿ ಕುಲಸಚಿವರು (ಪರೀಕ್ಷಾಂಗ), ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು–06 ಇವರಿಗೆ ಪತ್ರ ಬರೆಯಬೇಕು. ಪತ್ರ ತಲುಪಿದ 15 ದಿನಗಳೊಳಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತದೆ. ಅಂಕಪಟ್ಟಿಯಲ್ಲಿ ಏನಾದರೂ ದೋಷ ಕಂಡು ಬಂದಲ್ಲಿ ಕೂಡಲೇ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿ ಸರಿಪಡಿಸಿಕೊಳ್ಳತಕ್ಕದ್ದು.
- ಒಂದು ವೇಳೆ ಆಂತರಿಕ ನಿಬಂಧಗಳನ್ನು ಸಲ್ಲಿಸಿಯೂ ಅದರ ಅಂಕಗಳು ಪರೀಕ್ಷಾ ಫಲಿತಾಂಶದಲ್ಲಿ ಪ್ರಕಟಗೊಳ್ಳದಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ಫಲಿತಾಂಶ ಪ್ರಕಟಗೊಂಡ 30 ದಿನಗಳೊಳಗಾಗಿ ನಿಬಂಧನೆಗಳನ್ನು ಸಲ್ಲಿಸಿದ ದಾಖಲೆಗಳೊಂದಿಗೆ ಆಯಾ ಸಂಯೋಜನಾಧಿಕಾರಿಗಳನ್ನು ಸಂಪರ್ಕಿಸುವುದು.
- ವಿದ್ಯಾರ್ಥಿಗಳು ಕನ್ನಡ ಅಥವಾ ಇಂಗ್ಲೀಷ್‌ನಲ್ಲಿ ಪರೀಕ್ಷೆ ಬರೆಯಬಹುದು.

ಘಟಿಕೋತ್ಸವ :

(ಘಟಿಕೋತ್ಸವ / ಸ್ನಾತಕೋತ್ತರ ಪದವಿ ಸರ್ಟಿಫಿಕೇಟ್, ಡಿಪ್ಲೊಮಾ ಮತ್ತು ಸ್ನಾತಕಪೂರ್ವ ಪದವಿ ಸರ್ಟಿಫಿಕೇಟ್ ಕೋರ್ಸುಗಳ ಪ್ರಮಾಣ ಪತ್ರಗಳ ವಿವರಗಳಿಗಾಗಿ ವಿಶ್ವವಿದ್ಯಾನಿಲಯದ ವೆಬ್ ಸೈಟ್ ನೋಡಿ)ಘಟಿಕೋತ್ಸವವನ್ನು ಸಂಬಂಧಿತ ಶಿಕ್ಷಣ ಕ್ರಮಗಳ ಫಲಿತಾಂಶವು ಘೋಷಣೆಯಾದ ನಂತರ ವಿಶ್ವವಿದ್ಯಾನಿಲಯವು ನಡೆಸುತ್ತದೆ.ಇದರ ಬಗ್ಗೆ ಪ್ರತ್ಯೇಕ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ನಿಗದಿತ ಸಮಯದೊಳಗೆ ಕಳಿಸಲಾಗುತ್ತದೆ.

17. ಗುಣಾತ್ಮಕ ಉಪಕ್ರಮಗಳು

ವಿದ್ಯಾರ್ಥಿಗಳಿಗೆ ಗುಣಮಟ್ಟದ ಸೇವೆಯನ್ನು ಒದಗಿಸುವಲ್ಲಿ ವಿಶ್ವವಿದ್ಯಾನಿಲಯವು ಹಲವಾರು ಕ್ರಮಗಳನ್ನು ಕೈಗೊಂಡಿದೆ.ಆಂತರಿಕ ಗುಣಮಟ್ಟ ಭರವಸೆ ಕೇಂದ್ರವನ್ನು ಯು.ಜಿ.ಸಿ.ಆದೇಶದ ಅನುಸಾರ ರಚನೆ ಮಾಡಲಾಗಿದೆ.

ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಮೂಲಕ ಶಿಕ್ಷಣದ ರಾಷ್ಟ್ರೀಯ ಮಿಷನ್ (ಎನ್‌ಎಂಇ–ಐಸಿಟಿ)

ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಮೂಲಕ ಶಿಕ್ಷಣದ ರಾಷ್ಟ್ರೀಯ ಮಿಷನ್ (ಎನ್‌ಎಂಇ–ಐಸಿಟಿ) ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಎಲ್ಲ ಕಲಿಕೆಗಳಲ್ಲಿ ಮತ್ತು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಯಾವುದೇ ಸಮಯದಲ್ಲಿ, ಎಲ್ಲಿಯಾದರೂ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ಐಸಿಟಿಯ ಸಾಮರ್ಥ್ಯವನ್ನು ಹೆಚ್ಚಿಸಲು, ಕೇಂದ್ರೀಯ ಪ್ರಾಯೋಜಿತ ಯೋಜನೆಯಾಗಿ ರೂಪಿಸಲಾಗಿದೆ. XIನೇ ಪಂಚ ವಾರ್ಷಿಕ ಯೋಜನೆ ಅವಧಿಯಲ್ಲಿ ಉನ್ನತ ಶಿಕ್ಷಣದಲ್ಲಿ ಒಟ್ಟು ದಾಖಲಾತಿ ಅನುಪಾತವನ್ನು (ಜಿಇಆರ್) ಶೇಕಡಾ 5 ಅಂಕಗಳಿಂದ ಹೆಚ್ಚಿಸುವಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತದೆ ಎಂದು ನಿರೀಕ್ಷಿಸಲಾಗಿದೆ.

ಶಿಕ್ಷಣ ನೀತಿಯ ಮೂರು ಪ್ರಮುಖ ತತ್ವಗಳಾದ ಪ್ರವೇಶಾತಿ, ಇಕ್ವಿಟಿ ಮತ್ತು ಗುಣಮಟ್ಟವನ್ನು ಎಲ್ಲಾ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಿಗೆ ಸಂಪರ್ಕವನ್ನು ಒದಗಿಸುವುದರ ಮೂಲಕ, ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಕಡಿಮೆ ವೆಚ್ಚ ಮತ್ತು ಕೈಗೆಟುಕುವ ಪ್ರವೇಶ ಮತ್ತು ಕಂಪ್ಯೂಟಿಂಗ್ ಸಾಧನಗಳನ್ನು ಒದಗಿಸುವ ಮೂಲಕ ಮತ್ತು ಉತ್ತಮ ಗುಣಮಟ್ಟದ ಇ–ಕಂಟೆಂಟ್ ಒದಗಿಸುವ ಮೂಲಕ ಉತ್ತಮವಾಗಿ ಸೇವೆ ಸಲ್ಲಿಸಬಹುದು. ದೇಶದ ಎಲ್ಲಾ ಕಲಿಯುವವರಿಗೆ ಉಚಿತವಾಗಿ NME-ICT ಎಲ್ಲಾ ಮೂರು ಅಂಶಗಳನ್ನು ಒಳಗೊಂಡಿದೆ. ಮಿಷನ್ ಎರಡು ಪ್ರಮುಖ ಅಂಶಗಳನ್ನು ಹೊಂದಿದೆ.

1. ಸಂಸ್ಥೆಯಗಳು ಮತ್ತು ಕಲಿಯುವವರಿಗೆ ಪ್ರವೇಶ ಸಾಧನಗಳ ನಿಬಂಧನೆಯೊಂದಿಗೆ ಸಂಪರ್ಕವನ್ನು ಒದಗಿಸುವುದು;
2. ವಿಷಯ ಉತ್ಪಾದನೆ.

ಇದು ಡಿಜಿಟಲ್ ವಿಭಜನೆಯನ್ನು ನಿವಾರಿಸಲು ಪ್ರಯತಿಸುತ್ತದೆ. ಅಂದರೆ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ನಗರ ಮತ್ತು ಗ್ರಾಮೀಣ ಶಿಕ್ಷಕರು/ ಕಲಿಯುವವರಲ್ಲಿ ಬೋಧನೆ ಮತ್ತು ಕಲಿಕೆಯ ಉದ್ದೇಶಕ್ಕಾಗಿ ಕಂಪ್ಯೂಟಿಂಗ್ ಸಾಧನಗಳನ್ನು ಬಳಸುವ ಕೌಶಲ್ಯದಲ್ಲಿನ ಅಂತರ ಮತ್ತು ಇಲ್ಲಿಯವರೆಗೆ ಡಿಜಿಟಲ್ ಕ್ರಾಂತಿಯಿಂದ ಸ್ಪರ್ಶಿಸದೆ ಉಳಿದಿರುವವರಿಗೆ ಮತ್ತು ಜ್ಞಾನ ಆರ್ಥಿಕತೆಯ ಮುಖ್ಯವಾಹಿನಿಗೆ ಸೇರಲು ಸಾಧ್ಯವಾಗಲಿಲ್ಲ. ಇ–ಲರ್ನಿಂಗ್‌ಗೆ ಸೂಕ್ತವಾದ ಶಿಕ್ಷಣಶಾಸ್ತ್ರದ ಮೇಲೆ ಕೇಂದ್ರೀಕರಿಸಲು, ವರ್ಚುವಲ್ ಲ್ಯಾಬೊರೇಟರಿಗಳ ಮೂಲಕ ಪ್ರಯೋಗಗಳನ್ನು ನಡೆಸುವ ಸೌಲಭ್ಯವನ್ನು ಒದಗಿಸುವುದ, ಆನ್–ಲೈನ್ ಪರೀಕ್ಷೆ ಮತ್ತು ಪ್ರಮಾಣೀಕರಣ, ಮಾರ್ಗದರ್ಶಕರು ಮತ್ತು ಮಾರ್ಗದರ್ಶಕರಿಗೆ ಕಲಿಯುವವರಿಗೆ ಆನ್‌ಲೈನ್ ಲಭ್ಯತೆ, ಲಭ್ಯವಿರುವ ಶಿಕ್ಷಣ ಉಪಗ್ರಹ (ಎಡುಸಾಟ್) ಮತ್ತು ಡೈರೆಕ್ಟ್ ಕಲಿಕೆಯ ಹೊಸ ವಿಧಾನವನ್ನು ಪರಿಣಾಮಕಾರಿಯಾಗಿ ಬಳಸಲು ಮನೆ ವೇದಿಕೆಗಳಿಗೆ, ಶಿಕ್ಷಕರ ತರಬೇತಿ ಮತ್ತು ಸಬಲೀಕರಣಕ್ಕೆ, ಇತ್ಯಾದಿ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (ಕರಾಮುವಿ) ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಮೂಲಕ ಶಿಕ್ಷಣದ ರಾಷ್ಟ್ರೀಯ ಮಿಷನ್ (ಎನ್‌ಎಂಇ–ಐಸಿಟಿ) ಯನ್ನು ಅಳವಡಿಸಿಕೊಂಡಿದೆ.ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಒಂದು ಪ್ರಮುಖ ಉಪಕ್ರಮವು ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ಮಾಹಿತಿ ಮತ್ತು ತಂತ್ರಜ್ಞಾನ ಅಳವಡಿಸಿಕೊಳ್ಳುವ ಉದ್ದೇಶವನ್ನು ಹೊಂದಿದೆ.ಎಲ್ಲಾ ಕಲಿಯುವವರಿಗೆ ಅಂತರ್ಜಾಲದಲ್ಲಿ ಗುಣಮಟ್ಟ, ವೈಯಕ್ತಿಕಗೊಳಿಸಿದ ಮತ್ತು ಸಂವಾದಾತ್ಮಕ ಜ್ಞಾನ ಮಾಡ್ಯೂಲ್‌ಗಳು ಯಾವುದೇ ಸಮಯದಲ್ಲಿ, ಎಲ್ಲಿಯಾದರೂ ಮೋಡ್‌ನಲ್ಲಿ ಲಭ್ಯವಾಗುವಂತೆ ಕ್ರಮಕೈಗೊಂಡಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ಎನ್‌ಎಂಇ–ಐಸಿಟಿ ಮತ್ತು ವರ್ಚುಯಲ್ ಲ್ಯಾಬ್‌ಗಳಿಗಾಗಿ ಪ್ರತ್ಯೇಕ ಕೋಶವನ್ನು ರಚಿಸಲಾಗಿದ್ದು, ಮಾನವ ಸಂಪನ್ಮೂಲನ ಅಭಿವೃದ್ಧಿ ಸಚಿವಾಲಯ ನಿರ್ದೇಶಿಸಿದ ಐಸಿಟಿ ಉಪಕ್ರಮಗಳನ್ನು ಅಳವಡಿಸಿಕೊಂಡಿದ್ದು ಅವುಗಳ ವಿವರ ಹೀಗಿವೆ :

1. ಸ್ವಯಂ : ಬೃಹತ್ ಮುಕ್ತ ಆನ್‌ಲೈನ್ ಕೋರ್ಸ್‌ಗಳು
2. ಸ್ವಯಂಪ್ರಭ : ಟಿವಿಯಲ್ಲಿ ಡಿಜಿಟಲ್ ಕೋರ್ಸ್‌ಗಳನ್ನು ವೀಕ್ಷಣೆ
3. ರಾಷ್ಟ್ರೀಯ ಡಿಜಿಟಲ್ ಗ್ರಂಥಾಲಯ : ಇ–ವಿಷಯ
4. ಇ–ಪಿಜಿ ಪಾಠಶಾಲ : ಪಿಜಿ ವರೆಗಿನ ಇ–ಪುಸ್ತಕಗಳಿಗೆ ಗೇಟ್‌ವೇ
5. ಶೋಧಗಂಗ : ಭಾರತಿಯ ಪ್ರಬಂಧಗಳ ಜಲಾಶಯ
6. ಇ–ಶೋಧ ಸಿಂದು : ಇ– ಜರ್ನಲ್ಸ್
7. ಇ–ಯಂತ್ರ : ಉತ್ತಮ ನಾಳೆ ಎಂಜಿನಿಯರಿಂಗ್
8. ಫಾಸ್ಸಿ : ಶಿಕ್ಷಣಕ್ಕಾಗಿ ಉಚಿತ / ಲಿಬ್ರೆ ಮತ್ತು ಓಪನ್ ಸೋರ್ಸ್ ಸಾಫ್ಟ್‌ವೇರ್
9. ವರ್ಚುಯಲ್ ಲ್ಯಾಬ್‌ಗಳು : ರಿಮೋಟ್ – ಕಾರ್ಯಾಚರಣೆಗಾಗಿ ವಿನ್ಯಾಸಗೊಲಿಸಲಾದ ವೆಬ್–ಶಕ್ತಗೊಂಡ ಪ್ರಯೋಗಗಳು
10. ವಿಶ್ವವಿದ್ಯಾಲಯ ಉದ್ಯಮ ಸಂಪನ್ಮೂಲ ಯೋಜನೆ (ಸಮರ್ತ್)
11. ವಿದ್ವಾನ್ : ತಜ್ಞರ ಡೇಟಾ ಬೇಸ್ ಮತ್ತು ರಾಷ್ಟ್ರೀಯ ಸಂಶೋದನಾ ಜಾಲ
12. ಐರಿನ್ಸ್ : ಭಾರತೀಯ ಸಂಶೋಧನಾ ಮಾಹಿತಿ ಜಾಲ ವ್ಯವಸ್ಥೆ

13. ಶೋಧ್ ಶುದ್ಧಿ (ಪಿಡಿಎಸ್) : ಕೃತಿಚೌರ್ಯ ಪತ್ತೆ ತಂತ್ರಾಂಶ

ಸ್ವಯಂಪ್ರಭ

24X7 ಆಧಾರದ ಮೇಲೆ ದೇಶದ ಉದ್ದಗಲಕ್ಕೂ ಡಿಟಿಎಚ್ (ಡೈರೆಕ್ಟ್ ಟು ಹೋಮ್) ಮೂಲಕ 32 ಉನ್ನತ ಗುಣಮಟ್ಟದ ಶೈಕ್ಷಣಿಕ ಚಾನೆಲ್ಗಳನ್ನು ಒದಗಿಸಲು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಒಂದು ಉಪಕ್ರಮವೆಂದರೆ ಸ್ವಯಂ ಪ್ರಭಾ.ಇದು ವೈವಿಧ್ಯಮಯ ವಿಭಾಗಗಳನ್ನು ಒಳಗೊಂಡ ಪಠ್ಯಕ್ರಮ ಆಧಾರಿತ ಕೋರ್ಸ್ ವಿಷಯವನ್ನು ಹೊಂದಿದೆ.ಇಂಟರ್ನೆಟ್ ಲಭ್ಯತೆ ಇನ್ನೂ ಸವಾಲಾಗಿರುವ ದೂರದ ಪ್ರದೇಶಗಳಿಗೆ ಗುಣಮಟ್ಟದ ಕಲಿಕಾ ಸಂಪನ್ಮೂಲಗಳನ್ನು ಪ್ರವೇಶಿಸುವಂತೆ ಮಾಡುವುದು ಇದರ ಉದ್ದೇಶವಾಗಿದೆ. ಡಿಟಿಎಚ್ ಚಾನೆಲ್ಗಳು ಕಾರ್ಯಕ್ರಮದ ಪ್ರಸಾರಕ್ಕಾಗಿ ಜಿಎಸ್ಎಟಿ 15 ಉಪಗ್ರಹವನ್ನು ಬಳಸುತ್ತಿವೆ. ಪ್ರಮುಖ ಚಾನೆಲ್ಗಳನ್ನು ಸಂಪರ್ಕ ಕಾರ್ಯಕ್ರಮದಲ್ಲಿ ಅಳವಡಿಸಿಕೊಳ್ಳಲು ಮತ್ತು ಸಂಬಂಧಿತ ಚಾನೆಲ್ಗಳನ್ನು ವೀಕ್ಷಿಸಲು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಅವಕಾಶವನ್ನು ಒದಗಿಸಿದೆ.

ವರ್ಚುಯಲ್ ಲ್ಯಾಬ್ಗಳು

ವರ್ಚುಯಲ್ ಲ್ಯಾಬ್ಗಳು ಈ ಕೆಳಗಿನ ವಿಧಾನಗಳಲ್ಲಿ ಒಂದರಿಂದ (ಅಥವಾ ಬಹುಶಃ ಸಂಯೋಜನೆಯಿಂದ) ಪ್ರಯೋಗದ ಫಲಿತಾಂಶವನ್ನು ವಿದ್ಯಾರ್ಥಿಗಳಿಗೆ ಒದಗಿಸುತ್ತದೆ.ಭೌತಿಕ ವಿದ್ಯಮಾನವನ್ನು ಸಮೀಕರಣಗಳ ಮೂಲಕ ರೂಪಿಸುವುದು ಮತ್ತು ನಿರ್ದಿಷ್ಟ ಪ್ರಯೋಗದ ಫಲಿತಾಂಶವನ್ನು ನೀಡಲು ಸಿಮ್ಯುಲೇಶನ್ಗಳನ್ನು ನಿರ್ವಹಿಸುವುದು.ಇದು ಅತ್ಯುತ್ತಮವಾಗಿ, 'ನೈಜ–ಪ್ರಪಂಚ' ಪ್ರಯೋಗದ ಅಂದಾಜು ಆವೃತ್ತಿಯನ್ನು ಒದಗಿಸುತ್ತದೆ.ವಾಸ್ತವಿಕ ವ್ಯವಸ್ಥೆಯಲ್ಲಿನ ಅಳತೆಗಳಿಂದ ಹಿಂದೆಪಡೆದ ದತ್ತಾಂಶಕ್ಕೆ ಅನುಗುಣವಾದ ವರ್ಚುಯಲ್ ಲ್ಯಾಬ್ ಪ್ರಯೋಗಗಳಿಗೆ ಅಳತೆ ಮಾಡಿದ ಡೇಟಾವನ್ನು ಒದಗಿಸುವುದು.ನಿಜವಾದ ಲ್ಯಾಬ್ನಲ್ಲಿ ಪ್ರಯೋಗವನ್ನು ದೂರದಿಂದಲೇ ಪ್ರಚೋದಿಸುತ್ತದೆ ಮತ್ತು ಕಂಪ್ಯೂಟರ್ ಇಂಟರ್ಫೇಸ್ ಮೂಲಕ ವಿದ್ಯಾರ್ಥಿಗೆ ಪ್ರಯೋಗದ ಫಲಿತಾಂಶವನ್ನು ಒದಗಿಸುತ್ತದೆ.ಇದು ನಿಜವಾದ ಲ್ಯಾಬ್ ಪ್ರಯೋಗವನ್ನು ದೂರದಿಂದಲೇ ನಡೆಸುವುದು.ನಿಜವಾದ ಲ್ಯಾಬ್ ಪ್ರಯೋಗ ಮತ್ತು ಸಲಕರಣೆಗಳ ಆಡಿಯೋ ಮತ್ತು ವಿಡಿಯೋ ಸ್ಟ್ರೀಮಿಂಗ್ನಂತಹ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಒಳಹರಿವುಗಳನ್ನು ಒದಗಿಸುವ ಮೂಲಕ ವರ್ಚುಯಲ್ ಲ್ಯಾಬ್ಗಳನ್ನು ಹೆಚ್ಚು ಪರಿಣಾಮಕಾರಿ ಹಾಗು ವಾಸ್ತವಿಕವಾಗಿರುತ್ತದೆ.ಸ್ಪರ್ಶ ಮತ್ತು ಭಾವನೆ/ ಭಾಗಕ್ಕಾಗಿ, ವಿದ್ಯಾರ್ಥಿಗಳು ಅಲ್ಪಾವಧಿಗೆ ನಿಜವಾದ ಪ್ರಯೋಗಾಲಯಕ್ಕೆ ಭೇಟಿ ನೀಡಬಹುದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವನ್ನು ಸೂರತ್ಕಲ್ನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ನೇತೃತ್ವದಲ್ಲಿ ನೋಡಲ್ ಸೆಂಟರ್ ಫಾರ್ ವರ್ಚುವಲ್ ಲ್ಯಾಬ್ಸ್ ಎಂದು ಗುರುತಿಸಿಕೊಂಡಿದ್ದು ಕರಾಮುವಿಯ ವಿಜ್ಞಾನ ಭವನದಲ್ಲಿ ಸುಸಜ್ಜಿತ ವಿ ಲ್ಯಾಬ್ಸ್ ನೋಡಲ್ ಸೆಂಟರ್ ಅನ್ನು ಸ್ಥಾಪಿಸಿದೆ. ಇದು ಎನ್ಐಟಿಕೆ ಅಭಿವೃದ್ಧಿಪಡಿಸಿದ ಪ್ರಯೋಗಗಳನ್ನು ವಿದ್ಯಾರ್ಥಿಗಳು ಉಪಯೋಗಿಸಿಕೊಳ್ಳಲು ಮತ್ತು ಕರಾಮುವಿಯ ವಿದ್ಯಾರ್ಥಿಗಳ ಜ್ಞಾನದ ಅಗತ್ಯಗಳನ್ನು ಪೂರೈಸುತ್ತದೆ.

ಇ–ವಿಷಯ (ಇ–content) ಅಭಿವೃದ್ಧಿ :

ಯುಜಿಸಿ ಇ–ವಿಷಯ ಯೋಜನೆ ಉತ್ತಮ ಗುಣಮಟ್ಟದ ಇ–ವಿಷಯವನ್ನು ಅಭಿವೃದ್ಧಿಪಡಿಸುವ ಗುರಿಯನ್ನು ಹೊಂದಿದೆ, ಜೊತೆಗೆ ದೀರ್ಘಾವಧಿಯಲ್ಲಿ ಅಂತಹ ವಿಷಯವನ್ನು ಉತ್ಪಾದಿಸುವ ಪರಿಣತಿಯನ್ನು ಹೊಂದಿದೆ.ಈ ಯೋಜನೆಯು ಇ–ವಿಷಯದ ಅಭಿವೃದ್ಧಿಗೆ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳನ್ನು ಆಧರಿಸಿದ ಶಿಕ್ಷಕರು ಮತ್ತು ಇತರ ತಜ್ಞರಿಗೆ ಹಣಕಾಸಿನ ನೆರವು ಮತ್ತು ತಾಂತ್ರಿಕ ನೆರವು ನೀಡುತ್ತದೆ.ಇಲ್ಲಿ ವಿವರಿಸಿದ ಇ–ವಿಷಯ ಅಭಿವೃದ್ಧಿ ಮತ್ತು ಸಂಬಂಧಿತ ವೆಬ್ ಆಧಾರಿತ ಕಲಿಕೆ ಸಾಂಪ್ರದಾಯಿಕ ಬೋಧನೆ ಮತ್ತು ಕಲಿಕೆಯನ್ನು ಬದಲಿಸಲು ಪ್ರಯತ್ನಿಸುವುದಿಲ್ಲ. ಆದರೆ ಅವುಗಳಿಗೆ ಪೂರಕವಾಗುವ ನಿರೀಕ್ಷೆಯಿದೆ.ಕಲಿಕೆಯಲ್ಲಿ ಇ–ವಿಷಯವನ್ನು ಸೇರಿಸುವುದು ಈಗ ಅನಿವಾರ್ಯವಾಗಿದೆ ಮತ್ತು ಯುಜಿಸಿ ಉಪಕ್ರಮವು ಹೊಸ ಸವಾಲುಗಳನ್ನು ಎದುರಿಸಲು ವಿನ್ಯಾಸಗೊಳಿಸಲಾಗಿದೆ ಮತ್ತು ಹೊಸದಾಗಿ ಉದಯೋನ್ಮುಖವಾಗಿರುವ ಈ ಕ್ಷೇತ್ರದಲ್ಲಿ ಭಾರತವನ್ನು ಮುನ್ನಡೆಸಲು ಸಹಾಯ ಮಾಡುತ್ತದೆ.ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಎನ್ಎಂಇ–ಐಸಿಟಿ ಅಡಿಯಲ್ಲಿ ಇ–ವಿಷಯ ಪ್ರಸ್ತಾಪದ

ಅಭಿವೃದ್ಧಿಗೆ ಚಾಲನೆ ನೀಡಿರುವುದರ ಜೊತೆಯಲ್ಲಿ ಅನೇಕ ಯೋಜನೆಗಳನ್ನ ಅಭಿವೃದ್ಧಿಪಡಿಸುವಲ್ಲಿ ಅವಿರತವಾಗಿ ಕಾರ್ಯೋನ್ಮುಖವಾಗಿರುತ್ತದೆ.

ಆಂತರಿಕ ಗುಣಮಟ್ಟ ಆಶ್ವಾಸನಾ ಕೇಂದ್ರ (ಸಿ.ಐ.ಕ್ಯೂ.ಎ.)

ಆಂತರಿಕ ಗುಣಮಟ್ಟ ಆಶ್ವಾಸನಾ ಕೇಂದ್ರವು ಪ್ರತಿಯೊಂದು ಹಂತದಲ್ಲೂ ಗುಣಮಟ್ಟ ಸೇವೆಯನ್ನು ಒದಗಿಸಲು ಅಗತ್ಯ ಹಾಗೂ ಹಲವಾರು ಕ್ರಮಗಳನ್ನು ನೀಡುವ ಸಲುವಾಗಿ ಸಹಕರಿಸುವ ವರ್ಗಗಳೊಂದಿಗೆ (ಸ್ಟೇಕ್ ಹೋಲ್ಡರ್ಸ್) ಅನ್ಯೋನ್ಯ ಸಂಬಂಧವನ್ನು/ ಪರಸ್ಪರ ಕಾರ್ಯಚಟುವಟಿಕೆಯನ್ನು ಮಾಡುತ್ತಿದೆ. ಅಂದರೆ ಆಂತರಿಕ ಗುಣಮಟ್ಟ ಭರವಸೆ ಕೇಂದ್ರವು ವಿದ್ಯಾರ್ಥಿ ಪ್ರವೇಶ ಪಡೆದ ದಿನದಿಂದ ಪ್ರಾರಂಭಿಸಿ ತನ್ನ ಶೈಕ್ಷಣಿಕ ಗುರಿಗಳನ್ನು ಪೂರೈಸಿಕೊಳ್ಳುವ ಅವಧಿಯವರೆವಿಗೂ ಸಹಕಾರ ಒದಗಿಸುತ್ತದೆ.

ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರ:

ಉನ್ನತ ಹಾಗು ಗುಣಮಟ್ಟದ ಸಂಶೋಧನಾ ಹಾಗು ಶೈಕ್ಷಣಿಕ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸಲು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಪ್ರತ್ಯೇಕವಾದ ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರ ಸ್ಥಾಪಿಸಿರುತ್ತದೆ. ವಿವಿಧ ವಿಷಯಗಳ ಸಂಶೋಧನೆಗಳಲ್ಲಿ ಭಾಗವಹಿಸಿರುವ ವಿದ್ಯಾರ್ಥಿಗಳ ಹಾಗು ಶಿಕ್ಷಕರನ್ನು ಮತ್ತು ಅಧ್ಯಾಪಕರನ್ನು ಪ್ರೋತ್ಸಾಹಿಸುತ್ತದೆ. ಈ ಕೇಂದ್ರವು ಅಧ್ಯಾಪಕ ವರ್ಗ ಹಾಗು ವಿದ್ಯಾರ್ಥಿಗಳಿಗೆ ಸಂಶೋಧನೆ ಕೈಗಳ್ಳಲು ಹಾಗು ಶೈಕ್ಷಣಿಕ ಲೇಖನಗಳನ್ನು ಪ್ರಕಟಿಸಲು ಆರ್ಥಿಕ ನೆರವನ್ನು ಒದಗಿಸುತ್ತದೆ.ಮುಂದುವರೆದು, ಈ ಕೇಂದ್ರವು ವಿಭಾಗಗಳಲ್ಲಿ ಸಮ್ಮೇಳನಗಳು, ಶೈಕ್ಷಣಿಕ ಸಮ್ಮೇಳನ/ ಕಾರ್ಯಗಾರ ಆಯೋಜಿಸಲು ಪ್ರೋತ್ಸಾಹಿಸುತ್ತದೆ.

18. ಮಾಹಿತಿ ಮತ್ತು ಮಾರ್ಗದರ್ಶನ ಘಟಕ

ಮಾಹಿತಿ ಮತ್ತು ಮಾರ್ಗದರ್ಶನ ಘಟಕವು ವಿದ್ಯಾರ್ಥಿಗಳಿಗೆ ಅಗತ್ಯವಾದ ಎಲ್ಲಾ ಮಾಹಿತಿಗಳನ್ನು ಒದಗಿಸುತ್ತದೆ.ಅಂದರೆ ವಿಶ್ವವಿದ್ಯಾನಿಲಯವು ಒದಗಿಸುತ್ತಿರುವ ಶಿಕ್ಷಣಕ್ರಮಗಳು, ಪ್ರವೇಶಾತಿ, ಅಧ್ಯಯನ ಸಾಮಗ್ರಿಗಳು, ಸಂಪರ್ಕ ಕಾರ್ಯಕ್ರಮ, ಸಮಾಲೋಚನಾ ಕಾರ್ಯಕ್ರಮ, ಪರೀಕ್ಷೆಗಳು, ಪರೀಕ್ಷಾ ಫಲಿತಾಂಶ, ಅಂಕಪಟ್ಟಿಗಳು, ಅರ್ಹತಾ ಪತ್ರಗಳು, ವಿದ್ಯಾರ್ಥಿನಿಲಯದ ಸೌಲಭ್ಯ ಮುಂತಾದವುಗಳ ಬಗ್ಗೆ ಮಾಹಿತಿ ನೀಡುತ್ತದೆ.

ಮಾಹಿತಿ ಮತ್ತು ಮಾಗದರ್ಶನ ಘಟಕದಲ್ಲಿ ಸಾರ್ವಜನಿಕ ಸಂಪರ್ಕಾಧಿಕಾರಿಗಳು ಕಾರ್ಯನಿರ್ವಹಿಸುತ್ತಾರೆ.ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ, ವೈಯಕ್ತಿಕವಾಗಿ ಈ ಘಟಕಕ್ಕೆ ಭೇಟಿ ನೀಡಿ ಅಗತ್ಯ ಮಾಹಿತಿ ಪಡೆಯಬಹುದು.ಅಲ್ಲದೆ ದೂರವಾಣಿ ಮುಖಾಂತರವಾಗಿಯೂ ಘಟಕವನ್ನು ಸಂಪರ್ಕಿಸಬಹುದು.ಈ ಘಟಕದ ದೂರವಾಣಿ ಸಂಖ್ಯೆಗಳು 98453–63573 ಮತ್ತು 94494–89749, ಈ ಘಟಕದ ಕಛೇರಿಯು ಪ್ರವೇಶಾತಿ ವಿಭಾಗದ ಮುಖ್ಯದ್ವಾರದಲ್ಲಿದೆ.

<u>ಮಾರ್ಗದರ್ಶನ ಮತ್ತು ಸಮಾಲೋಚನೆ</u>

ವಿದ್ಯಾರ್ಥಿ ಜೀವನವು ಸಂಕೀರ್ಣ ಹಾಗೂ ಸೂಕ್ಷ್ಮತೆಯುಳ್ಳದ್ದಾಗಿದೆ. ವಿದ್ಯಾರ್ಥಿಗಳು 21 ನೆಯ ಶತಮಾನದಲ್ಲಿ ಹೊಸ ಸವಾಲುಗಳನ್ನು ಎದುರಿಸುತ್ತಿದ್ದಾರೆ ಹಾಗೂ ಸಂದಿಗ್ಧ ಪರಿಸ್ಥಿತಿಯಲ್ಲಿದ್ದಾರೆ.ಇದರಿಂದಾಗಿ ವಿದ್ಯಾರ್ಥಿಗಳಿಗೆ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮಾರ್ಗದರ್ಶನ ಮತ್ತು ಸಮಾಲೋಚನೆಯ ಅಗತ್ಯತೆ ಇದೆ.ಶೈಕ್ಷಣಿಕ, ಕೌಶಲ್ಯಅಭಿವೃದ್ಧಿ, ವೃತ್ತಿ ತಿಳುವಳಿಕೆ, ಜೀವನ ಕೌಶಲಗಳು, ಸ್ಥಾನ ನಿಯುಕ್ತಿಕರಣ (ಉದ್ಯೋಗ ಪಡೆಯುವಿಕೆ), ಉನ್ನತ ಶಿಕ್ಷಣದ ಅವಕಾಶ ಹಾಗೂ ಇನ್ನಿತರ ಅಂಶಗಳಿಗೆ ಮಾರ್ಗದರ್ಶನ ಅಗತ್ಯವಾಗುತ್ತದೆ. ವಿಶ್ವವಿದ್ಯಾನಿಲಯವು ಸುಸಜ್ಜಿತವಾದ ಮಾರ್ಗದರ್ಶನ ಮತ್ತು ಸಮಾಲೋಚನಾ ಕೇಂದ್ರವನ್ನು ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಸ್ಥಾಪಿಸಿದೆ ಮತ್ತು ಅನ್ಯೋನ್ಯ ಕ್ರಿಯಾ ವೇದಿಕೆಯನ್ನು ಆರಂಭಿಸುತ್ತಿದೆ.ವೇದಿಕೆ, ವರ್ಚ್ಯುಯಲ್ ತರಗತಿ ಕೊಠಡಿ, ತಜ್ಞರಿಂದ ಉಪನ್ಯಾಸಗಳನ್ನು ನೀಡುವುದು, ಡಿಜಿಟಲ್ ಗ್ರಂಥಾಲಯ ಸೇವೆಗಳು ಮತ್ತು ಇನ್ನಿತರ ಬೆಂಬಲ ಸೇವೆಗಳನ್ನು ಮುಂದಿನ ದಿನಗಳಲ್ಲಿ ಸೃಜಿಸಲಾಗುವುದು.

ಸಮೂಹ ಸಂದೇಶ :(Bulk Message)

ಅರ್ಭರ್ಥಿಗಳಿಗೆ ಸಮೂಹ ಸಂದೇಶದ ಮೂಲಕ ಶೀಘ್ರ ಮಾಹಿತಿಯನ್ನು ಕಳುಹಿಸಲು ವಿಶ್ವವಿದ್ಯಾನಿಲಯವು ವ್ಯವಸ್ಥೆಯನ್ನು ಸೃಷ್ಟಿಸಿದೆ.ದಾಖಾಲಾತಿ ಪರಿಶೀಲನೆ, ಗುರುತಿನ ಚೀಟಿ ರವಾನೆ, ಸಮಾಲೋಚನೆ/ಸಂಪರ್ಕ ಕಾರ್ಯಕ್ರಮ/ ಅಂತರಿಕ ನಿಬಂಧಗಳ ಸಲ್ಲಿಕೆ/ ಪರೀಕ್ಷಾ ಶುಲ್ಕ ಪಾವತಿ, ಪರೀಕ್ಷೆ ಸಂಬಂಧ ಮಾಹಿತಿ ಮೊದಲಾದವನ್ನು ಸಮೂಹ ಸಂದೇಶದ ಮೂಲಕ ತಿಳಿಸಲಾಗುವುದು.

ಅನ್ಯೋನ್ಯ (Interactive) ಕ್ರಿಯಾ ವೇದಿಕೆ

ಕಲಿಕಾರ್ಥಿಗಳ ಅಗತ್ಯತೆಗಳನ್ನು ಪೂರೈಸುವ ಸಲುವಾಗಿ ಮಾಹಿತಿ ಮತ್ತು ತಂತ್ರಜ್ಞಾನದ ಬೆಳವಣಿಗೆಯಿಂದ ದೊರೆತಿರುವ ಲಾಭಗಳನ್ನು ಬಳಸಿಕೊಳ್ಳಲು ವಿಶ್ವವಿದ್ಯಾನಿಲಯವು ಕ್ರಮಗಳನ್ನು ಕೈಗೊಳ್ಳುತ್ತಿದೆ.ಅನ್ಯೋನ್ಯ ಕ್ರಿಯಾ ವೇದಿಕೆ, ವರ್ಚ್ಯುಯಲ್ ತರಗತಿ ಕೊಠಡಿ, ತಜ್ಞರಿಂದ ಉಪನ್ಯಾಸಗಳನ್ನು ನೀಡುವುದು, ಡಿಜಿಟಲ್ ಗ್ರಂಥಾಲಯ ಸೇವೆಗಳು ಮತ್ತು ಇನ್ನಿತರ ಬೆಂಬಲ ಸೇವೆಗಳನ್ನು ಮುಂದಿನ ದಿನಗಳಲ್ಲಿ ಸೃಜಿಸಲಾಗುವುದು.

19. ಕಲಿಕಾರ್ಥಿಗಳ ಕಲ್ಯಾಣ ಕೇಂದ್ರ

ಕಲಿಕಾರ್ಥಿಗಳ ಸಹಾಯ ಸೇವೆಗಳು ವಿಶ್ವವಿದ್ಯಾನಿಲಯದ ಬಹಳ ಪ್ರಮುಖವಾದ ಅಂಗವಾಗಿದೆ. ಇದು ವಿಸ್ತೃತವಾದ ಶೈಕ್ಷಣಿಕ, ಮೌಲ್ಯಮಾಪನ, ವಿಸ್ತರಣೆ ಮತ್ತು ಇತರೆ ಸಂಬಂಧಿತ ಚಟುವಟಿಕೆಗಳನ್ನು ಒಳಗೊಂಡಿದೆ. ಈ ಬೆಂಬಲದ ಸೇವೆಗಳು ದೂರ ಶಿಕ್ಷಣಾರ್ಥಿಗಳ ಅವಶ್ಯಕತೆಗಳಿಗೆ ಸ್ಪಂದಿಸುವುದಷ್ಟೇ ಆಗಿರದೆ ಸಕ್ರಿಯವಾದ ಪಾತ್ರವನ್ನೂ ವಹಿಸುತ್ತದೆ. ಆದ್ದರಿಂದಲೇ, ವಿಶ್ವವಿದ್ಯಾನಿಲಯವು ಕಲಿಕಾರ್ಥಿಗಳ ಅವಶ್ಯಕತೆಗಳು ಮತ್ತು ಕುಂದುಕೊರತೆಗಳನ್ನು ನಿವಾರಿಸುವುದರ ಜೊತೆಗೆ ಮುಂದಿನ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಪ್ರವೇಶಾತಿ ಬಯಸಿ ಮಾಹಿತಿಕೋರುವ ವಿದ್ಯಾರ್ಥಿಗಳಿಗೆ ಸೂಕ್ತ ರೀತಿಯಲ್ಲಿ ಸಲಹೆ ಮತ್ತು ಮಾರ್ಗದರ್ಶನವನ್ನು ನೀಡಲು ಪೂರ್ಣ ಪ್ರಮಾಣದ ಕಲಿಕಾರ್ಥಿ ಕಲ್ಯಾಣ ಕೇಂದ್ರವನ್ನು ಸ್ಥಾಪಿಸಿದೆ. ಶೈಕ್ಷಣಿಕ ಆಪ್ತ ಸಮಾಲೋಚನೆ, ವಿದ್ಯಾರ್ಥಿಗಳು ಕೋರುವ ಮಾಹಿತಿಗಳನ್ನು ಸಕಾಲದಲ್ಲಿ ಒದಗಿಸುವುದು, ಕುಂದುಕೊರತೆಗಳನ್ನು ನಿವಾರಿಸುವುದು, ಮತ್ತು ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪುರಸ್ಕರಿಸುವುದರ ಮುಖಾಂತರ ಕಲಿಕಾರ್ಥಿಗಳ ಕಲ್ಯಾಣವನ್ನು ಖಾತ್ರಿಗೊಳಿಸಲು ವಿಶ್ವವಿದ್ಯಾನಿಲಯವು ಬಯಸುತ್ತದೆ. ವಿಶ್ವವಿದ್ಯಾನಿಲಯವು ವಿದ್ಯಾರ್ಥಿಗಳಿಗೆ ಉತ್ತಮವಾದ ಶೈಕ್ಷಣಿಕ ಅನುಭವಗಳನ್ನು ಪಡೆಯಲು ಮತ್ತು ಆ ಮುಖಾಂತರ ವಿಶ್ವವಿದ್ಯಾನಿಲಯದ ರಾಯಭಾರಿಯಾಗಿ ಮುಂದೆ ರೂಪುಗೊಳ್ಳಲು ಉತ್ಕೃಷ್ಟವಾದ ಶೈಕ್ಷಣಿಕ ವಾತಾವರಣವನ್ನು ಸೃಷ್ಟಿಸಲು ಇಚ್ಛಿಸುತ್ತದೆ. ಕಲಿಕಾರ್ಥಿಗಳಿಗೆ ವಿವಿಧ ರೂಪಗಳಲ್ಲಿ ಬೆಂಬಲವನ್ನು ನೀಡುತಿದ್ದು, ಅವುಗಳು ಈ ಕೆಳಕಂಡಂತಿವೆ:

1. ವಿಶ್ವವಿದ್ಯಾನಿಲಯದ ಕಾರ್ಯಕ್ರಮಗಳಿಗೆ ಸೇರಲು ಬಯಸುವ ವಿದ್ಯಾರ್ಥಿಗಳಿಗೆ ನೀಡುವ ಸಹಾಯ
2. ಶೈಕ್ಷಣಿಕ ಕಾರ್ಯಕ್ರಮಗಳಿಗೆ ಈಗಾಗಲೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಗೆ ನೀಡುವ ಸಹಾಯ
3. ಹಳೆ ವಿದ್ಯಾರ್ಥಿಗಳಿಗೆ ಸಹಾಯ ಮತ್ತು ಬೆಂಬಲ
4. ಕುಂದುಕೊರತೆಗಳ ನಿವಾರಿಸುವುದಕ್ಕೆ ನೀಡುವ ಸಹಾಯ

ಕಲಿಕಾರ್ಥಿಗಳ ಕಲ್ಯಾಣಕೇಂದ್ರದ ಮುಖ್ಯಸ್ಥರಾಗಿ ಸಂಯೋಜನಾಧಿಕಾರಿಗಳು ಆಡಳಿತಾತ್ಮಕ ಸಿಬ್ಬಂದಿಗಳಾದ ಸಹಾಯಕ ಕುಲಸಚಿವರು ಮತ್ತು ಇತರರ ನೆರವಿನಿಂದ ಕಾರ್ಯ ನಿರ್ವಹಿಸುತ್ತಾರೆ. ಈ ಕೇಂದ್ರವು ವಿಶ್ವವಿದ್ಯಾನಿಲಯದ ಧನ ಸಹಾಯ ಆಯೋಗ, ವಿಶ್ವವಿದ್ಯಾನಿಲಯ ಮತ್ತು ಪಾಲುದಾರರ ನಡುವೆ ಸಮನ್ವಯ ತರಲು ವ್ಯವಹರಿಸುತ್ತದೆ.

ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಮಾಹಿತಿಯನ್ನು ಅರಸಿ ಬರುವ ಮತ್ತು ಕುಂದು ಕೊರತೆಗಳನ್ನು ಬಗೆಹರಿಸಿಕೊಳ್ಳಲು ವಿದ್ಯಾರ್ಥಿಗಳು ಕಲಿಕಾರ್ಥಿ ಕಲ್ಯಾಣ ಕೇಂದ್ರದಡಿಯಲ್ಲಿ ಕಾರ್ಯ ನಿರ್ವಹಿಸುವ ಸಹಾಯ ವಾಣಿಯನ್ನು ಸಂಪರ್ಕಿಸಲು ಕೋರಿದೆ.

ಸಹಾಯವಾಣಿ ಸಂಖ್ಯೆ: + 91-8690544544.

E-mail:ksoulwc@gmail.com and contactus.ksou@gmail.com

ಡಾ. ಸುಧಾಕರ .ಎಂ. ಸಂಯೋಜನಾಧಿಕಾರಿಗಳು, ಕಲಿಕಾರ್ಥಿ ಕಲ್ಯಾಣ ಕೇಂದ್ರ, ಕರಾಮುವಿ, ಮೈಸೂರು-06

ಹಿರಿಯ ವಿದ್ಯಾರ್ಥಿಗಳ ಸಂಘ

ಹಣಕಾಸಿನ ಮತ್ತು ಇತರ ಪ್ರೋತ್ಸಾಹಗಳು/ಸೇವೆಗಳ ಮೂಲಕ ಸಂಸ್ಥೆಯ ಅಭಿವೃದ್ಧಿಗೆ ಗಣನೀಯವಾಗಿ ಕೊಡುಗೆ ನೀಡುವ ಸಲುವಾಗಿ ವಿವಿಯಲ್ಲಿ ನೋಂದಾಯಿತ ಹಿರಿಯ ವಿದ್ಯಾರ್ಥಿಗಳ ಸಂಘವನ್ನು ಸ್ಥಾಪಿಸಲಾಗಿದೆ.

ಹಿನ್ನೆಲೆ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಹಿರಿಯ ವಿದ್ಯಾರ್ಥಿಗಳ ಸಂಘವು (KSOUAA) ಕರ್ನಾಟಕ ಸಹಕಾರ ಸಂಘಗಳ ನೋಂದಣಿ ಕಾಯಿದೆ 1960 ರ ಅಡಿಯಲ್ಲಿ 23.07.2020 ರಂದು ನೋಂದಣಿ ಸಂಖ್ಯೆ: DRMY/SOR/82/2020-21 ರ ಅಡಿಯಲ್ಲಿ ಒಂದು ಸಂಘವಾಗಿ ನೋಂದಾಯಿಸಲ್ಪಟ್ಟಿದೆ.

KSOU A.A ಯ ಉದ್ದೇಶಗಳು:

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹಿರಿಯ ವಿದ್ಯಾರ್ಥಿಗಳನ್ನು ಅನುಭವ ವಿನಿಮಯ ಮತ್ತು ಜ್ಞಾನದ ಪ್ರಸಾರಕ್ಕಾಗಿ ಒಂದು ವೇದಿಕೆಯಡಿಗೆ ತರುವುದು.

- ಸೆಮಿನಾರ್‌ಗಳು, ಸಮ್ಮೇಳನಗಳು, ಕಾರ್ಯಾಗಾರಗಳು, ಉದ್ಯೋಗ ಚಟುವಟಿಕೆಗಳು, ದತ್ತಿ ಉಪನ್ಯಾಸಗಳು ಮತ್ತು ಇತರ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುವುದು ಮತ್ತು ವಿಶ್ವವಿದ್ಯಾಲಯದ ಅಧ್ಯಾಪಕರು, ನಿರ್ವಾಹಕರು ಮತ್ತು ವಿದ್ಯಾರ್ಥಿಗಳು ಪರಸ್ಪರ ಸಂಪರ್ಕದಲ್ಲಿರಲು ಅನುವು ಮಾಡಿಕೊಡುವುದು.

- ತಮ್ಮ ಅಧ್ಯಯನದಲ್ಲಿ ಹೆಚ್ಚಿನ ಪ್ರಾವೀಣ್ಯತೆಯನ್ನು ತೋರಿಸುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಗಳು, ಬಹುಮಾನಗಳು ಮತ್ತು ಪದಕಗಳನ್ನು ನೀಡಲು ಹಳೆಯ ವಿದ್ಯಾರ್ಥಿಗಳ ದತ್ತಿಗಳನ್ನು ರಚಿಸುವುದು ಮತ್ತು ವಿಶ್ವವಿದ್ಯಾಲಯದ ಹಿಂದಿನ ವಿದ್ಯಾರ್ಥಿಗಳನ್ನು ಗೌರವಿಸುವುದು.

- ಉನ್ನತ ಶಿಕ್ಷಣ, ತರಬೇತಿ ಮತ್ತು ನಿರ್ವಹಣಾ ವ್ಯವಸ್ಥೆಗಳು, ವಿಶ್ವವಿದ್ಯಾಲಯಗಳು ಮತ್ತು ಇತರ ಶೈಕ್ಷಣಿಕ ಸಂಸ್ಥೆ ಮತ್ತು ಸಂಘಗಳ ಮೂಲಕ ಮುಕ್ತ ಕಲಿಕೆಯ ಉತ್ತೇಜನಕ್ಕೆ ಸಂಬಂಧಿಸಿದಂತೆ ODL ನ ಉದ್ದೇಶಗಳನ್ನು ಪ್ರತಿಪಾದಿಸಲು ಮತ್ತು ಕೊಡುಗೆ ನೀಡುವುದು ಮತ್ತು ಆ ಮೂಲಕ ವಿಶ್ವವಿದ್ಯಾಲಯದ ಕಲ್ಯಾಣ ಮತ್ತು ಸ್ಥಿತಿಯನ್ನು ಉತ್ತೇಜಿಸುವುದು.

- ಮೇಲಿನ ಉದ್ದೇಶಗಳ ಸಾಧನೆಗಾಗಿ ಸದಸ್ಯರು, ಸದಸ್ಯರಲ್ಲದವರು, ಸರ್ಕಾರಗಳು, ವಿಶ್ವವಿದ್ಯಾಲಯಗಳು ಮತ್ತು ಇತರ ಸಂಸ್ಥೆಗಳು ಮತ್ತು ಲೋಕೋಪಕಾರಿಗಳಿಂದ ಚಂದಾದಾರಿಕೆಗಳು, ಕೊಡುಗೆಗಳು, ದೇಣಿಗೆಗಳು ಮತ್ತು ಉಡುಗೊರೆಗಳ ಮೂಲಕ ಹಣವನ್ನು ಸಂಗ್ರಹಿಸುವುದು.

- ವಿಶ್ವವಿದ್ಯಾನಿಲಯದಲ್ಲಿ ಕಲಿಯುತ್ತಿರುವ ಅರ್ಹ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲು.

- ವಿಶ್ವವಿದ್ಯಾಲಯ ಮತ್ತು ಅದರ ಹಳೆಯ ವಿದ್ಯಾರ್ಥಿಗಳ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಜರ್ನಲ್‌ಗಳು, ನಿಯತಕಾಲಿಕೆಗಳು, ಸ್ಮಾರಕಗಳು ಮತ್ತು ಸುದ್ದಿಪತ್ರಗಳನ್ನು ಪ್ರಕಟಿಸಲು.

- ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳನ್ನು ಆಯೋಜಿಸುವುದು ಮತ್ತು ಪ್ರತಿ ವರ್ಷ ಹಿರಿಯ ವಿದ್ಯಾರ್ಥಿಗಳ ದಿನಾಚರಣೆಯನ್ನು ನಡೆಸುವುದು.

- ಹಿರಿಯ ವಿದ್ಯಾರ್ಥಿಗಳು ಶಿಕ್ಷಣ ಮತ್ತು ಉದ್ಯೋಗಾವಕಾಶಗಳಿಗೆ ಸಂಬಂಧಿಸಿದಂತೆ ಎದುರಿಸಬಹುದಾದ ವಿವಿಧ ತಾಂತ್ರಿಕ ಸಮಸ್ಯೆಗಳ ಕುರಿತು ವಿಶ್ವವಿದ್ಯಾಲಯದಿಂದ ಸಲಹೆ ಅಥವಾ ಸಹಾಯ ನೀಡಲು

- ಮೇಲಿನ ಗುರಿಗಳು ಮತ್ತು ಉದ್ದೇಶಗಳ ಅನುಷ್ಠಾನಕ್ಕೆ ಅಗತ್ಯವಿರುವ ಇತರ ಚಟುವಟಿಕೆಗಳನ್ನು ಕೈಗೊಳ್ಳಲು.

ಪ್ರಸಾರಾಂಗ (ವಿಶ್ವವಿದ್ಯಾಲಯದ ಪ್ರಕಟಣೆಗಳ ವಿಭಾಗ)

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಕಾಶನ ವಿಭಾಗವಾದ ಪ್ರಸಾರಾಂಗವು ಪುಸ್ತಕ ಪ್ರಕಟಣೆಗಳು ಮತ್ತು ವಿಸ್ತರಣಾ ಚಟುವಟಿಕೆಗಳ ಉದ್ದೇಶಕ್ಕಾಗಿ 2008 ರಲ್ಲಿ ಸ್ಥಾಪನೆಯಾದ ಒಂದು ವಿಶಿಷ್ಟ ಸಂಸ್ಥೆಯಾಗಿದೆ. ಇಲ್ಲಿಯವರೆಗೆ, ಪ್ರಸಾರಾಂಗವು ಹಲವಾರು ಪುಸ್ತಕಗಳು ಮತ್ತು ಸಂಶೋಧನಾ ಗ್ರಂಥಗಳನ್ನು ಪ್ರಕಟಿಸಿದೆ, ಇದು ಶಿಕ್ಷಣ ತಜ್ಞರು ಮತ್ತು ವಿದ್ಯಾರ್ಥಿಗಳಿಂದ ಉತ್ತಮ ಪ್ರತಿಕ್ರಿಯೆಯನ್ನು ಪಡೆದಿದೆ. 2021 ರಲ್ಲಿ, ಪ್ರಸಾರಾಂಗವು ಭವಿಷ್ಯದ ಪ್ರಕಟಣೆಗಳಿಗಾಗಿ ISBN ಸಂಖ್ಯೆಯನ್ನು ಪಡೆಯಲು ರಾಜಾ ರಾಮ್ ಮೋಹನ್ ರಾಯ್ ರಾಷ್ಟ್ರೀಯ ಏಜೆನ್ಸಿಯಲ್ಲಿ ನೋಂದಾಯಿಸಲ್ಪಟ್ಟಿದೆ. ಪ್ರೊ.ಡಿ.ಕೆ ರಾಜೇಂದ್ರ ಅವರು ಮೊದಲ ನಿರ್ದೇಶಕರಾಗಿದ್ದು (2008–2013), ನಂತರ ಡಾ.ತೇಜಸ್ವಿ ನವಿಲೂರು (2009–2020), ಮತ್ತು ಪ್ರಸ್ತುತ ಡಾ.ಸಂತೋಷ್ ನಾಯಕ್.ಆರ್ (2020 ರಿಂದ) ಪ್ರಸ್ತುತ ನಿರ್ದೇಶಕರಾಗಿದ್ದಾರೆ.

ಮುನ್ನೋಟ

- ವಿಶ್ವಾತ್ಮಕಜ್ಞಾನವನ್ನು ಹೆಚ್ಚಿಸಲು ಗುಣಮಟ್ಟದ ಪ್ರಕಟಣೆಗಳನ್ನು ತರಲು.
- ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಮೌಲ್ಯಯುತವಾದ ಗ್ರಂಥಗಳನ್ನು ರಚಿಸಲು ಬರಹಗಾರರು, ಲೇಖಕರು ಮತ್ತು ಸಂಶೋಧಕರನ್ನು ಪ್ರೋತ್ಸಾಹಿಸುವುದು.

ಗುರಿ

ಯಾವುದೇ ವಿಶ್ವವಿದ್ಯಾಲಯದ ಗುರಿ ಜ್ಞಾನವನ್ನು ಸೃಷ್ಟಿಸುವುದು ಮತ್ತು ಹಂಚಿಕೊಳ್ಳುವುದು. ವಿಶ್ವವಿದ್ಯಾನಿಲಯದ ಪ್ರಕಾಶನ ವಿಭಾಗವು ಜ್ಞಾನವನ್ನು ವ್ಯಾಪಕವಾಗಿ ಹಂಚಿಕೊಳ್ಳುವ ಮತ್ತು ಪ್ರಚಾರ ಮಾಡುವ ಉದ್ದೇಶದ ಅತ್ಯಗತ್ಯ ಭಾಗವಾಗಿದೆ. ಇತರ ಪ್ರಕಾಶಕರು ಸಮಗ್ರವಾಗಿ ಒಳಗೊಂಡಿರದ ಗುಣಮಟ್ಟದ ಪ್ರಕಟಣೆಯತ್ತ ನಾವು ಗಮನಹರಿಸಿದ್ದೇವೆ.

ಭವಿಷ್ಯದ ಯೋಜನೆಗಳು

- ಸಂಶೋಧಕರು, ಪ್ರಾಧ್ಯಾಪಕರು ಮತ್ತು ಇತರ ತಜ್ಞರು ಬರೆದ ಲೇಖನಗಳನ್ನು ಒಳಗೊಂಡಿರುವ ವಿದ್ವತ್ಪೂರ್ಣ ಪ್ರಕಟಣೆಯೊಂದಿಗೆ ಅಂತರಶಿಸ್ತೀಯ ಜರ್ನಲ್ ಪ್ರಕಟಿಸುವುದು.
- ಎಲ್ಲಾ ಪುಸ್ತಕಗಳ ಡಿಜಿಟಲೀಕರಣ.
- ವಿವಿಧ ವಿಷಯಗಳಲ್ಲಿ ಪಠ್ಯಪುಸ್ತಕಗಳನ್ನು ಪ್ರಕಟಿಸುವುದು.
- ಸಮಾಜ ವಿಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ನಿರ್ವಹಣೆ ಮತ್ತು ಇತರ ವೃತ್ತಿಪರ ಕ್ಷೇತ್ರಗಳಲ್ಲಿ ಪುಸ್ತಕಗಳನ್ನು ಬರೆಯಲು ವಿಶೇಷ ಒತ್ತು ನೀಡುವ ಮೂಲಕ ಕನ್ನಡದಲ್ಲಿ ಯುವ ಬರಹಗಾರರನ್ನು ಉತ್ತೇಜಿಸುವುದು. ಪುಸ್ತಕಗಳಿಗಾಗಿ ಆನ್‌ಲೈನ್ ವೇದಿಕೆಯನ್ನು ರಚಿಸಲು.
- ಹೆಚ್ಚಿನ ಮೌಲ್ಯ ಮತ್ತು ಬೇಡಿಕೆಯಿರುವ ಪುಸ್ತಕಗಳ ಮರುಮುದ್ರಣ ಮಾಡುವುದು.

20. ಇತರೆ ಮಾಹಿತಿಗಳು

ವಿಷಯ ಬದಲಾವಣೆ

ವಿದ್ಯಾರ್ಥಿಗಳು ವಿಷಯಗಳನ್ನು ಬದಲಾವಣೆ ಮಾಡಿಕೊಳ್ಳಬೇಕಾದಲ್ಲಿ ಆಯಾ ಆವೃತ್ತಿಯಲ್ಲಿ ಪ್ರವೇಶಾತಿ ಪಡೆದು, ಪ್ರವೇಶಾತಿಗೆ ನಿಗದಿಪಡಿಸಿರುವ ಅಂತಿಮ ದಿನಾಂಕದೊಳಗೆ ನಿಯಮಾನುಸಾರ ಒಂದು ವಿಷಯಕ್ಕೆ (ಅಂದರೆ ಒಂದು ಭಾಷಾ ಅಥವಾ ಒಂದು ಐಚ್ಛಿಕ ವಿಷಯಕ್ಕೆ) ರೂ.1,000/- ಗಳನ್ನು ಪಾವತಿಸಿ ಬದಲಾವಣೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಬೋಧನಾ ಮಾಧ್ಯಮದ ಬದಲಾವಣೆ

ಪ್ರವೇಶಾತಿ ಸಮಯದಲ್ಲಿ ವಿದ್ಯಾರ್ಥಿ ಆಯ್ಕೆ ಮಾಡಿಕೊಂಡ ಬೋಧನ ಮಾಧ್ಯಮವನ್ನು ಬದಲಾಯಿಸಿಕೊಳ್ಳುವುದಕ್ಕೆ ಅವಕಾಶವಿದೆ. ಆಯಾ ಆವೃತ್ತಿಯಲ್ಲಿ ಪ್ರವೇಶಾತಿ ಪಡೆದು, ಪ್ರವೇಶಾತಿಗೆ

ನಿಗದಿಪಡಿಸಿರುವ ಅಂತಿಮ ದಿನಾಂಕದೊಳಗೆ ಅರ್ಜಿಯೊಂದಿಗೆ ರೂ.1,000/- ಗಳನ್ನು ಆನ್‌ಲೈನ್ ಮೂಲಕ ಪಾವತಿಸಿ **ಉಪ ಕುಲಸಚಿವರು (ಪ್ರವೇಶಾತಿ)** ಇವರಿಗೆ ಅರ್ಜಿಯನ್ನು ವಿದ್ಯಾರ್ಥಿಯು ಸಲ್ಲಿಸಬೇಕು.

ಆಯ್ಕೆಯ ಬೋಧನಾ ಮಾಧ್ಯಮದ ಅಧ್ಯಯನ ಸಾಮಗ್ರಿಗಳನ್ನು ಪಡೆಯಲು ಅವಕಾಶವಿದೆ. ಅಲ್ಲದೆ ಪ್ರವೇಶಾತಿ ಸಂದರ್ಭದಲ್ಲಿ ಅಧ್ಯಯನ ಸಾಮಗ್ರಿಗಳನ್ನು ಪಡೆದುಕೊಂಡಾಗ ಅವು ಯಾವ ಸ್ವರೂಪದಲ್ಲಿದ್ದವೋ ಅದೇ ಸ್ವರೂಪದಲ್ಲಿ ಹಿಂದಿರುಗಿಸಲು ಅವಕಾಶವಿದೆ. ಹಿಂದಿರುಗಿಸಲು ಉದ್ದೇಶಿಸಿದ ಅಧ್ಯಯನ ಸಾಮಗ್ರಿಗಳು ಬೇರೆ ವಿದ್ಯಾರ್ಥಿಗಳಿಗೆ ನೀಡಲು ಸೂಕ್ತವಲ್ಲವೆಂದು ಕಂಡುಬಂದಾಗ ಅವುಗಳನ್ನು ಅಧ್ಯಯನ ಸಾಮಗ್ರಿಗಳ ವಿಭಾಗ ಸ್ವೀಕರಿಸುವುದಿಲ್ಲ.

ವಿಳಾಸ ಬದಲಾವಣೆ

ಪ್ರವೇಶಾತಿ ಸಮಯದಲ್ಲಿ ವಿದ್ಯಾರ್ಥಿಯು ನೀಡಿದ್ದ ವಿಳಾಸವನ್ನು ಬದಲಾವಣೆ ಮಾಡಿಕೊಳ್ಳಬೇಕಾದ ಸಂದರ್ಭದಲ್ಲಿ ವಿದ್ಯಾರ್ಥಿಯೇ **ಉಪ ಕುಲಸಚಿವರು (ಪ್ರವೇಶಾತಿ), ಕರಾಮುವಿ, ಮೈಸೂರು** ಇವರಿಗೆ ಪತ್ರ ಬರೆದು ಪ್ರವೇಶಾತಿ ವಿಭಾಗಕ್ಕೆ ತಿಳಿಸಬೇಕು. ಅಲ್ಲದೇ, ಬದಲಾವಣೆ ಆಗಬೇಕಾದ ವಿಳಾಸವು ಬದಲಾವಣೆಯಾಗಿ ಪ್ರವೇಶಾತಿ ದಾಖಲೆಯಲ್ಲಿ ಸೇರಿಸಲಾಗಿದೆಯೇ? ಅಥವಾ ಇಲ್ಲವೇ? ಎಂಬುದನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ಖಚಿತಪಡಿಸಿಕೊಳ್ಳಬೇಕು. ಇದು ಬಹಳ ಮುಖ್ಯ, ಏಕೆಂದರೆ, ನೀಡಿರುವ ವಿಳಾಸ ಸರಿ ಇದ್ದಲ್ಲಿ ಮಾತ್ರ ಅಧ್ಯಯನ ಸಾಮಗ್ರಿಗಳು, ಮಾಹಿತಿ, ಅರ್ಜಿ ನಮೂನೆ ಇವುಗಳನ್ನು ಕಾಲ ಕಾಲಕ್ಕೆ ವಿದ್ಯಾರ್ಥಿಗೆ ಕಳುಹಿಸಿ ತಲುಪಿಸಬಹುದು.

ಹೆಸರು ಬದಲಾವಣೆ

ವ್ಯಾಸಂಗದ ಅವಧಿಯಲ್ಲಿ ವಿದ್ಯಾರ್ಥಿಯು ಹೆಸರು ಬದಲಾವಣೆ ಮಾಡಿಕೊಳ್ಳುವ ಸಂಬಂಧ ಈ ಕೆಳಕಂಡ ದಾಖಲಾತಿಗಳನ್ನು ಉಪಕುಲಸಚಿವರು (ಸಾಮಾನ್ಯ), ಇವರಿಗೆ ಸಲ್ಲಿಸಬೇಕು.

- ಹೆಸರು ಬದಲಾವಣೆ ಅರ್ಜಿ.
- ಹೆಸರು ಬದಲಾವಣೆ ಸಂಬಂಧ ನ್ಯಾಯಾಲಯದಿಂದ ಪಡೆದಿರುವ ಜಡ್ಜ್‌ಮೆಂಟ್ (ಡಿಕ್ರಿ). ಛಾಯಾ ಪ್ರತಿ.
- ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ 2 ಭಾವಚಿತ್ರಗಳು.
- ಎಸ್.ಬಿ.ಐ. ನಲ್ಲಿ ಶುಲ್ಕ ಪಾವತಿಸಿದ ವಿವರಗಳು
- ಎಸ್.ಎಸ್.ಎಲ್.ಸಿ ಅಂಕಪಟ್ಟಿ / ಕ್ಯೂಮುಲೇಟಿವ್ ರೆಕಾರ್ಡ್‌ನ ದೃಢೀಕೃತ ಛಾಯಾ ಪ್ರತಿ
- ಪಿ.ಯು.ಸಿ. ಅಂಕಪಟ್ಟಿಯ ದೃಢೀಕೃತ ನಕಲು ಪ್ರತಿ.
- ವಿದ್ಯಾರ್ಥಿಯ ಗುರುತಿನ ಪತ್ರದ (ಐ.ಡಿ. ಕಾರ್ಡ್) ದೃಢೀಕೃತ ಛಾಯಾ ಪ್ರತಿ.
- ಪ್ರವೇಶಾತಿ ಶುಲ್ಕ ಪಾವತಿಸಿದ ವಿವರದ ದೃಢೀಕೃತ ಛಾಯಾ ಪ್ರತಿ.
- ವಾರ್ತಾ ಪತ್ರಿಕೆಯಲ್ಲಿ ನೀಡಿದ ಜಾಹಿರಾತು ಪ್ರತಿ.
- **ವಿಶ್ವವಿದ್ಯಾನಿಲಯ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಹೊಸ ಹೆಸರು ಜಾರಿಗೆ ಬರುತ್ತದೆ.**

ನಕಲು ಗುರುತಿನ ಪತ್ರ ನವೀಕರಣ

ಒಂದು ವೇಳೆ ಮೂಲ ಗುರುತಿನ ಕಾರ್ಡ್ ಕಳೆದು ಹೋದಲ್ಲಿ ಆನ್‌ಲೈನ್‌ನಲ್ಲಿ ರೂ.300/- ಗಳನ್ನು ಪಾವತಿಸಿ ನಕಲು ಗುರುತಿನ ಕಾರ್ಡ್ ಪಡೆಯಬಹುದು. ನಕಲು ಗುರುತಿನ ಕಾರ್ಡ್ ಪಡೆಯಲು ಈ ಕೆಳಕಂಡ ದಾಖಲೆಗಳನ್ನು ಒದಗಿಸಬೇಕಾಗುತ್ತದೆ :

ಅ. ಉಪಕುಲಸಚಿವರು (ಪ್ರವೇಶಾತಿ), ಕರಾಮುವಿ, ಮೈಸೂರು-6 ವಿಭಾಗ ಇವರಿಗೆ ವಿದ್ಯಾರ್ಥಿ ಪತ್ರ ಬರೆಯಬೇಕು.

